RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎಸ್. ಓಲೇಕಾರ | ಸಿಇಒ: ಚಂದ್ರಶೇಖರ ಎಸ್.ಕೆ. | ಸಹ ಸಂಪಾದಕರು: ಶಿವಕುಮಾರ

# ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಹೊಸ ಪಿಎಫ್ ನೀತಿ ವಿರೋಧಿಸಿ ಶಾಹಿ ಗಾರ್ಮೆಂಟ್ಸ್ ಕಾರ್ಮಿಕರ ಪ್ರತಿಭಟನೆ 》2

ವೈದ್ಯಕೀಯ ಕ್ಷೇತ್ರದಲ್ಲಿ ಫಾರ್ಮಸಿ ಅಧಿಕಾರಿಗಳ ಪಾತ್ರ ಮಹತ್ವದ್ದು 》3

ಆಸ್ಪತ್ರೆ ಹಾಗೂ ಕ್ಯಾಂಟಿನ್‌ಗೆ ಜಿಲ್ಲಾಧಿಕಾರಿ ಭೇಟಿ, ಸ್ವಚ್ಛತೆಗೆ ಆದ್ಯತೆ ನೀಡಿ 》4

ಸಂಪುಟ (Volume): 1 ಸಂಚಿಕೆ (Issue): 189 ಪುಟ (Page): 4 ದರ Rs. 2 ಗುರುವಾರ 1 ಅಕ್ಟೋಬರ್ 2026 ● 1 OCTOBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

# ಆರ್ಥಿಕ ಇಲಾಖೆ ಪತ್ರಕ್ಕೆ ಬಿಜೆಪಿ ಸರ್ಕಾರದ ಅನಾಹುತ ಕಾರಣ

## ಬಿಎಸ್‌ವೈ ಅವಧಿಯಲ್ಲಿ ಬಜೆಟ್ ಮೀರಿ ಯೋಜನೆಗಳ ಕಾಮಗಾರಿ | ಸಿಎಂ ಡಿಕೆಶಿ ವ್ಯಾಖ್ಯಾನ

**ಚಾಮರಾಜನಗರ:** ಮಾಜಿ ಸಿಎಂ ಬಿಎಸ್ ಯಡಿಯೂರಪ್ಪನವರು ಬಜೆಟ್ ಮೀರಿ ಯೋಜನೆಗಳ ಕಾಮಗಾರಿ ಪ್ರಾರಂಭಿಸಿದ್ದರು. ಬಿಜೆಪಿ ಸರ್ಕಾರಗಳ ಇಂತಹ ಅನಾಹುತಗಳಿಂದಾಗಿಯೇ ಆರ್ಥಿಕ ಇಲಾಖೆಯವರು ನಮಗೆ ಪತ್ರ ಬರೆದಿದ್ದಾರೆ ಎಂದು ಸಿಎಂ ಡಿಕೆ ಶಿವಕುಮಾರ್ ವ್ಯಾಖ್ಯಾನಿಸಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಆರ್ಥಿಕ ಇಲಾಖೆ ಬರೆದಿರುವ ಪತ್ರದ ಬಗ್ಗೆ ಚಾಮರಾಜನಗರ ಜಿಲ್ಲೆಯ ಹನೂರಿನ ಕೆಎಚ್ ಬಿ ಹೆಲಿಪ್ಯಾಡ್ ಬಳಿ ಪ್ರತಿಕ್ರಿಯೆ ನೀಡಿದ ಅವರು, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.



30 ಸಾವಿರ ಕೋಟಿಗೂ ಅಧಿಕ ಹಣ ಬಿಡುಗಡೆಯಾಗಿಲ್ಲ ಎಂಬ ಗುತ್ತಿಗೆದಾರರ ಪತ್ರದಬಗ್ಗೆ ಕೇಳಿದಾಗ, "ಯಡಿಯೂರಪ್ಪ ಅವರ ಸರ್ಕಾರದ ಅವಧಿಯಲ್ಲಿ ಕೊಟ್ಟ ಕೆಲಸಗಳು ಮುಗಿಯುತ್ತಿದ್ದು, ಬಿಲ್ ನೀಡಬೇಕಾಗಿದೆ. ನಾನು ಅದರ ಬಗ್ಗೆ ಆಲೋಚನೆ ಮಾಡುವೆ. ಗುತ್ತಿಗೆದಾರರು ಉಳಿಯಬೇಕು. ಹೀಗಾಗಿ ಸಧ್ಯದಲ್ಲೇ ಆಲೋಚನೆ ಮಾಡುತ್ತೇನೆ" ಎಂದರು.

ಈಗಲೂ ಪರ್ಸೆಂಟೇಜ್ ಕಮಿಷನ್ ನೀಡಬೇಕು ಎಂಬ ಗುತ್ತಿಗೆದಾರರ ಸಂಘದ ಅದ್ಯಕ್ಷರು ಆರೋಪ ಮಾಡಿರುವ ಬಗ್ಗೆ ಕೇಳಿದಾಗ, "ಅವರು ಅಫಿಡವಿಟ್ ಸಲ್ಲಿಸಲಿ. ಈ ಬಗ್ಗೆ ತನಿಖೆ ಮಾಡಿಸಲಾಗುವುದು" ಎಂದರು.

490 ಕೋಟಿ ಮೊತ್ತದ ನೀರಾವರಿ ಯೋಜನೆ ಶಂಕುಸ್ಥಾಪನೆ ಯಾವಾಗ ಎಂದು ಕೇಳಿದಾಗ, "ಈ ವಿಚಾರ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಬೇಕು. ಅನೇಕ ಸಮಿತಿಗಳಿದ್ದು, ಅಲ್ಲೂ ಚರ್ಚೆಯಾಗಬೇಕು. ನಂತರ ಮಂಡಳಿಗಳಲ್ಲಿ ಅನುಮತಿ ಪಡೆದು, ಸಚಿವ ಸಂಪುಟ ಅನುಮತಿ ಪಡೆದು ಟೆಂಡರ್ ಕರೆಯಬೇಕು. ಆ ಬಳಿಕ ಕಾಮಗಾರಿ ಆರಂಭಿಸಲಾಗುವುದು. ಇದಕ್ಕೆ ಆದ ಪ್ರಕ್ರಿಯೆಗಳಿವೆ" ಎಂದು ವಿವರಿಸಿದರು.

### ಚಾಮರಾಜನಗರ ನನಗೆ ಪ್ರಿಯವಾದ ಸ್ಥಳ

"ಚಾಮರಾಜನಗರ ನನ್ನ ಪ್ರಿಯಾವಾದ ಸ್ಥಳ. ನನ್ನ ಕ್ಷೇತ್ರ ಇದರ ಜೊತೆ ಗಡಿ ಹಂಚಿಕೊಂಡಿದೆ. ಇದು ಹಸಿರಿನ ತಪ್ಪಲು, ಇಲ್ಲಿನ ಜನ ಶ್ರಮಜೀವಿಗಳು. ಕೃಷಿಯೇ ಅವರ ಬದುಕು. ಎಲ್ಲಾ ವರ್ಗದ ಜನರಿಗೆ ಆಶ್ರಯ ನೀಡಿರುವ ಪುಣ್ಯಭೂಮಿ. ಮಲೆ ಮಾದೇಶ್ವರನ ಇತಿಹಾಸದ ಭೂಮಿ. ಈ ಭಾಗಕ್ಕೆ ಸಂಸ್ಕಾರದ ಆಸ್ತಿ. ಈ ಭಾಗದ ಜನರ ನಂಬಿಕೆ. ನನ್ನ ಕ್ಷೇತ್ರದ ಮೂಲಕ ಸಾವಿರಾರು ಜನ ಪಾದಯಾತ್ರೆ ಮೂಲಕ ಕಾವೇರಿ ನದಿ ದಾಟಿ ಭಕ್ತಿಯಿಂದ ಈ ಧಾರ್ಮಿಕ ಕೇಂದ್ರಕ್ಕೆ ಬರುತ್ತಾರೆ" ಎಂದರು. "ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಸಿದ್ದಪ್ಪಾಜಿ ದೇವಾಲಯಗಳಿವೆ. ನಾನು ಸಿದ್ದಪ್ಪಾಜಿ ದೇವಾಲಯಕ್ಕೆ ನಡೆದುಕೊಂಡು ಬಂದಿರುವೆ. ಪ್ರತಿ ವರ್ಷ ಸಂಕ್ರಾಂತಿ ಬಳಿಕ ಸಿದ್ದಪ್ಪಾಜಿಗೆ ಪೂಜೆ ಮಾಡುವುದು ನಮ್ಮ ಕುಟುಂಬದ ಪದ್ಧತಿ ಇದೆ. ಅಲ್ಲಿ ನಮ್ಮ ಆಸ್ತಿ ಇದ್ದು, ಅಲ್ಲಿ ಸಮುದಾಯ ಭವನ ಮಾಡುವ ಆಲೋಚನೆ ಇದೆ. ಇದು ಹಿಂದುಳಿದ ವರ್ಗದ ಪ್ರದೇಶ ಎಂಬ ಭಾವನೆ ಇದೆ. ಹೀಗಾಗಿ ಸಿದ್ದರಾಮಯ್ಯ ಅವರ ನಮ್ಮ ಸರ್ಕಾರ ಮಲೆ ಮಾದೇಶ್ವರನ ಬೆಟ್ಟದಲ್ಲಿ ವಿಶೇಷ ಸಚಿವ ಸಂಪುಟ ಸಭೆ ಮಾಡಿ ಅನೇಕ ಘೋಷಣೆ ಮಾಡಲಾಗಿತ್ತು. ನೀರಾವರಿ ಅಭಿವೃದ್ಧಿಗೂ ಈ ವರ್ಷ ಎಲ್ಲಾ ಕ್ಷೇತ್ರಗಳಲ್ಲೂ ಕಾಮಗಾರಿ ಕೈಗೊಳ್ಳಲಾಗಿದೆ. ಅಭಿವೃದ್ಧಿ ಕೆಲಸ ಆರಂಭಿಸಲು ಬಂದಿದ್ದೇನೆ" ಎಂದು ಹೇಳಿದರು. ಶಿಕಾರಿಪುರದಿಂದ ಕಾಂಗ್ರೆಸ್ ಪಕ್ಷದ ಯಾತ್ರೆ ಬಗ್ಗೆ ಕೇಳಿದಾಗ, "ಹರಿಪ್ರಸಾದ್ ಅವರು ಪಕ್ಷದ ಸಂಘಟನೆಗೆ ಈ ಯಾತ್ರೆ ಮಾಡುತ್ತಿದ್ದಾರೆ. ಭಾರತ ಜೋಡೋ ಅದು ರಾಹುಲ್ ಗಾಂಧಿ ಅವರದ್ದು. ಅದರ ನೆನಪಿನಲ್ಲಿ ನಮ್ಮ ಅಧ್ಯಕ್ಷರು ಕಾರ್ಯಕ್ರಮ ರೂಪಿಸಿದ್ದಾರೆ" ಎಂದರು.

ಬಿಜೆಪಿ ಸರ್ಕಾರ ಭೂ ಸುಧಾರಣೆ ಕಾಯ್ದೆಗೆ ಮಾಡಿದ್ದ ತಿದ್ದುಪಡಿ ರದ್ದು ಮಾಡಬೇಕು ಎಂದು ಬಿ ಆರ್ ಪಾಟೀಲ್ ಅವರು ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿರುವ ಬಗ್ಗೆ ಕೇಳಿದಾಗ, "ಈ ವಿಚಾರ ಪರಿಶೀಲನೆ ಮಾಡಲಾಗುವುದು" ಎಂದು ತಿಳಿಸಿದರು. ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ಮರುಪರಿಶೀಲನೆ ವೇಳೆ ಜಾತಿ ಪ್ರಮಾಣಪತ್ರ ಕೇಳುತ್ತಿರುವ ಬಗ್ಗೆ ಕೇಳಿದಾಗ, "ಹೊರ ರಾಜ್ಯದವರು ಇಲ್ಲಿ ಯೋಜನೆ ಪಡೆಯುತ್ತಿದ್ದಾರೆ ಎಂಬ ಕಾರಣ–ಕ್ಕೆ ನಾವು ಹೊಸ ಅರ್ಜಿ ಸಿದ್ಧಪಡಿಸಿದ್ದೇವೆ. ಯಾರು ನಮ್ಮ ಮತದಾರರು, ಅರ್ಹರಿದ್ದಾರೆ ಅವರನ್ನು ಪರಿಗಣಿಸಲಾಗುವುದು. ಇನ್ನು ನಾವು ಮರುಪರಿಶೀಲನೆ ಅರ್ಜಿ ವಿತರಣೆ ಮಾಡಿಲ್ಲ" ಎಂದು ತಿಳಿಸಿದರು.

**ಚುನಾವಣಾ ಆಯೋಗ ಪ್ರಜಾಸತಾತ್ಮಕವಾಗಿ ಕಾರ್ಯನಿರ್ವಹಿಸುತ್ತಿಲ್ಲ:** ಸಿಡ್ಬ್ಲ್ಯುಸಿ ಸಭೆಯಲ್ಲಿ ಎಸ್‌ಐಆರ್ ರದ್ದತಿಗೆ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕೇಳಿದಾಗ, "ನಮ್ಮ ವಿರೋಧ ಒಂದು ಕಡೆ ಇರಲಿ, ಮೋದಿ ಸರ್ಕಾರ ನಿಯೋಜಿಸಿದ್ದ ಇನ್ನಿಬ್ಬರು ಆಯುಕ್ತರು ಕೆಲವು ನಿರ್ಧಾರಗಳ ಬಗ್ಗೆ ಅಪಸ್ವರ ಎತ್ತಿದ್ದರಲ್ಲ. ಆಯೋಗ ಪ್ರಜಾಸತಾತ್ಮಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇಲ್ಲಿ ತಪ್ಪುಗಳು ಆಗಿವೆ ಎಂಬುದು ಗೊತ್ತಾಗಿದೆ. ಜನರ ಭಾವನೆ, ಬಡವರು, ಅಲ್ಪಸಂಖ್ಯಾತರ ಮತದಾನದ ಹಕ್ಕು ಕಸಿಯುವ ಕೆಲಸವಾಗುತ್ತಿದೆ. ಇದರ ವಿರುದ್ಧ ನಮ್ಮ ಹೋರಾಟ ಮುಂದುವರಿಯುತ್ತದೆ" ಎಂದು ತಿಳಿಸಿದರು.

## ಸೌಜನ್ಯಾ ಪ್ರಕರಣ, ಮರು ತನಿಖೆಗೆ 16 ಅಧಿಕಾರಿಗಳ ತಂಡ ರಚನೆ

**ಬೆಂಗಳೂರು:** ಸೌಜನ್ಯಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ಮರುತನಿಖೆಗಾಗಿ ಎಸ್ ಐಟಿ ತಂಡ ರಚನೆ ಮಾಡಲಾಗಿದೆ. ಇದೀಗ ತಂಡಕ್ಕೆ ಸಹಾಯಕರಾಗಿ 16 ಮಂದಿಯನ್ನು ನೇಮಕ ಮಾಡಲಾಗಿದೆ. ಈ ಸಂಬಂಧ ಡಿಜಿ ಹಾಗೂ ಐಜಿಪಿ ಡಾ. ಎಂ.ಎ ಸಲೀಂ ಅವರು ಸಪ್ಟೆಂಬರ್ 29 ರಂದು ಆದೇಶ ಮಾಡಿದ್ದಾರೆ.

**ತಂಡದ ವಿವರ**

ಐದು ಮಂದಿಯ ಅಧಿಕಾರಿಗಳ ತಂಡವನ್ನು ಸೆ. 24 ರಂದು ಸರಕಾರ ರಚನೆ ಮಾಡಿತ್ತು. ಎಸ್ ಐಟಿ ತನಿಖಾ ದಳದ ಮುಖ್ಯಸ್ಥರಾಗಿ ಐಪಿಎಸ್ ಎನ್ ಶಶಿಕುಮಾರ್ ಪೋಲೀಸ್, ಮಹಾನಿರೀಕ್ಷಕರು ಹಾಗೂ ಸದಸ್ಯರಾಗಿ, ಮಂಗಳೂರು ನಗರ ಪೊಲೀಸ್ ಆಯುಕ್ತರಾದ ಸಿ ಎಚ್ ಸುಧೀರ್ ಕುಮಾರ್ ರೆಡ್ಡಿ ಬೆಂಗಳೂರು



ರಾಜ್ಯ ಗುಪ್ತ ವಾರ್ತೆ ಯ ನಿಶಾ ಜೇಮ್ಸ್, ಬೆಂಗಳೂರು ಸಿ ಐ ಡಿ ಪೊಲೀಸ್ ಅಧೀಕ್ಷಕರಾದ ಲೋಕೇಶ್ ಜಗಲಸಾರ್ , ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧಿಕ್ಷಕರಾದ ವೆಂಕಟೇಶ್ ಪ್ರಸನ್ನ ಅವರನ್ನು ನೇಮಕ ಮಾಡಲಾಗಿತ್ತು.

**ನೇಮಕ ಮಾಡಿರುವ 16 ಮಂದಿ ಸದಸ್ಯರು ಯಾರ್ಯಾರು?:** ಸೌಜನ್ಯಾ ಪ್ರಕರಣದ ಮರುತನಿಖೆಗೆ ರಚಿಸಿರುವ ಎಸ್ ಐಟಿ ತಂಡದ ತನಿಖಾ ಸಹಾಯಕ್ಕೆ ಸದಸ್ಯರಾಗಿ 16 ಮಂದಿಯನ್ನು ಮಂಗಳವಾರ ನೇಮಕ ಮಾಡಲಾಗಿದೆ. ಇವರು ತಕ್ಷಣವೇ ತಮ್ಮ ಠಾಣೆಗಳಿಂದ ಬಿಡುಗಡೆಗೊಂಡು ಎಸ್‌ಐಟಿ ತಂಡಕ್ಕೆ ಬೆಂಗಳೂರಿನಲ್ಲಿ ವರದಿ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ.

ಎಸ್‌ಐಟಿ ತನಿಖಾ ಸಹಾಯಕರಾಗಿ ಮಂಗಳೂರು ನಗರ ಸಿಸಿಬಿಯ ಎಸಿಪಿ ಮನೋಜ್ ಕುಮಾರ್ ನಾಯಕ್, ಬೆಂಗಳೂರು ಸಿಸಿಬಿ ಎಸಿಪಿ ರಾಮಚಂದ್ರ.ಬಿ, ಸಿ ಐ ಡಿ ಇನ್ಸ್‌ಪೆಕ್ಟರ್ ದೀಪಕ್, ಇನ್ಸ್‌ಪೆಕ್ಟರ್ ಮೋಹನ್ ಡಿ ಪಾಟೀಲ್, ಮಡಿವಾಳ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಈಶ್ವರಿ, ಕೊಣಾಜೆ ಪೊಲೀಸ್ ಠಾಣೆ–ಯ ಪಿಎಸ್‌ಐ ಪುನೀತ್ ಗಾವಂಕರ್, ದಕ್ಷಿಣ ಸಂಚಾರಿ ಪೊಲೀಸ್ ಠಾಣೆ–ಯ ಪಿಎಸ್‌ಐಪ್ರದೀಪ್ , ಕಂಕನಾಡಿ ಪೊಲೀಸ್ ಠಾಣೆಯ ಪಿಎಸ್‌ಐ ಅನಿತಾ ನಿಕಂ, ಮಂಗಳೂರು ಸಿಸಿಬಿ ಎ ಎಸ್ ಐ ಮೋಹನ್, ಕಂಕನಾಡಿ ಪೊಲೀಸ್ ಠಾಣೆಯ ಸಿಬ್ಬಂದಿ ಪ್ರದೀಪ್ ಕುಮಾರ್ ರೈ, ಗೋವರ್ಧನ್, ದಿನೇಶ್ ಎನ್, ಉಲ್ಲಾಳ ಪೊಲೀಸ್ ಠಾಣೆಯ ಸಿಬ್ಬಂದಿ ರಾಧಾಕೃಷ್ಣ ಕೆಕೆ, ಕಾವೂರು ಪೊಲೀಸ್ ಠಾಣೆಯ ಸಿಬ್ಬಂದಿ ರೆಜಿ.ವಿ.ಎಂ, ಸುರತ್ಕಲ್ ಪೊಲೀಸ್ ಠಾಣೆಯ ಸಿಬ್ಬಂದಿ ರಾಜೇಂದ್ರ ಪ್ರಸಾದ್ ವಿಪಿ, ಕಂಕನಾಡಿ ಪೊಲೀಸ್ ಠಾಣೆ ಮಹಿಳಾ ಸಿಬ್ಬಂದಿ ಪ್ರಮೀಳ ಅವರನ್ನು ಒಳಗೊಂಡ ತನಿಖಾ ತಂಡವನ್ನು ರಚನೆ ಮಾಡಲಾಗಿದೆ.

## ನೆರವು ನೀಡಲು ಕೇಂದ್ರಕ್ಕೆ ಪತ್ರ ಬರೆದ ಎಚ್‌ಡಿಕೆ

### ಕರ್ನಾಟಕದಲ್ಲಿ ಅಂದಾಜು 18,748.23 ಕೋಟಿ ರೂಪಾಯಿ ಮೌಲ್ಯದ ಬೆಳೆ ನಷ್ಟ

ದೆಹಲಿ: ರಾಜ್ಯಾದ್ಯಂತ ತೀವ್ರ ಬರ ಪರಿಸ್ಥಿತಿ ಮತ್ತು ಅಂದಾಜು 18,748.23 ಕೋಟಿ ರೂಪಾಯಿ ಮೌಲ್ಯದ ಬೆಳೆ ನಷ್ಟವನ್ನು ಉಲ್ಲೇಖಿಸಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಕರ್ನಾಟಕಕ್ಕೆ ಕೇಂದ್ರದ ನೆರವು ಕೋರಿದ್ದಾರೆ. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ ಅವರಿಗೆ ಸೆಪ್ಟೆಂಬರ್ 24ರಂದು ಬರೆದ ಪತ್ರದಲ್ಲಿ, ಕುಮಾರಸ್ವಾಮಿ ಅವರು ಸೆಪ್ಟೆಂಬರ್ 9ರ ವೇಳೆಗೆ ಕರ್ನಾಟಕದಲ್ಲಿ ಶೇ.34 ರಷ್ಟು ಮಳೆ ಕೊರತೆ ದಾಖಲಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದ 31 ಜಿಲ್ಲೆಗಳ ಪೈಕಿ 30 ಜಿಲ್ಲೆಗಳು ಮತ್ತು 240 ತಾಲೂಕುಗಳ ಪೈಕಿ 182 ತಾಲೂಕುಗಳು ಮಳೆ ಕೊರತೆಯನ್ನು ಎದುರಿಸುತ್ತಿವೆ ಎಂದು ವಿವರಿಸಿರುವ ಕುಮಾರಸ್ವಾಮಿ, ಕರ್ನಾಟಕ ಸರ್ಕಾರದ ಮೌಲ್ಯಮಾಪನದ ಅಂಕಿ–ಅಂಶಗಳನ್ನು ಉಲ್ಲೇಖಿಸಿದ್ದಾರೆ. 101 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ ಮತ್ತು ಅದರಲ್ಲಿ 89 ತಾಲೂಕುಗಳನ್ನು ತೀವ್ರವಾಗಿ ಬಾಧಿತವಾದವು ಎಂದು ವರ್ಗೀಕರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

**ಕರ್ನಾಟಕ ಸರ್ಕಾರವು 3,705.30 ಕೋಟಿ ರೂಪಾಯಿ ನೆರವನ್ನು ಕೋರಿದೆ:** ಬರಗಾಲವು ಕೃಷಿ ವಲಯಕ್ಕೆ ಅಪಾರ ಹಾನಿಯನ್ನು ಉಂಟುಮಾಡಿದ್ದು, 19.52 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಸಂಭವಿಸಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ. ಬೆಳೆ ನಷ್ಟದ ಅಂದಾಜು ಮೌಲ್ಯ 18,748.23 ಕೋಟಿ ರೂಪಾಯಿ ಎಂದು ಅವರು ಅಂದಾಜಿಸಿದ್ದಾರೆ. ರಾಜ್ಯ ವಿಪತ್ತು ಪರಿಹಾರ ನಿಧಿ (ಖಆಖಈ) ಮತ್ತು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಓಆಖಈ) ನಿಯಮಗಳ ಅಡಿಯಲ್ಲಿ ಕರ್ನಾಟಕ ಸರ್ಕಾರವು 3,705.30 ಕೋಟಿ ರೂಪಾಯಿ ನೆರವನ್ನು ಕೋರಿದೆ ಎಂಬ ಅಂಶವನ್ನು ಕುಮಾರಸ್ವಾಮಿ ಉಲ್ಲೇಖಿಸಿದ್ದಾರೆ. "ಕೇಂದ್ರ ತಂಡದ ಮೌಲ್ಯಮಾಪನವು ಬರಗಾಲ ಮತ್ತು ಬೆಳೆ ನಷ್ಟದ ವ್ಯಾಪ್ತಿಯನ್ನು ನಿರ್ಧರಿಸಲು ಹಾಗೂ ಅನ್ವಯವಾಗುವ ನಿಯಮಗಳಡಿ ಕರ್ನಾಟಕಕ್ಕೆ ಹೆಚ್ಚಿನ ನೆರವು ನೀಡುವ ಕುರಿತು ಪರಿಗಣಿಸಲು ಸಹಕಾರಿಯಾಗಲಿದೆ. ಪರಿಸ್ಥಿತಿಯ ಗಂಭೀರತೆ ಮತ್ತು ಬಾಧಿತ ಪ್ರದೇಶಗಳ ರೈತರು ಎದುರಿಸುತ್ತಿರುವ ಸಂಕಷ್ಟಗಳನ್ನು ಗಮನದಲ್ಲಿಟ್ಟುಕೊಂಡು, ಅಂತರ



ಸಚಿವಾಲಯದ ಕೇಂದ್ರ ತಂಡವೊಂದನ್ನು ಆದಷ್ಟು ಶೀಘ್ರವಾಗಿ ಕರ್ನಾಟಕಕ್ಕೆ ಕಳುಹಿಸುವಂತೆ ನಾನು ನಿಮ್ಮನ್ನು ಕೋರುತ್ತೇನೆ" ಎಂದು ಕುಮಾರಸ್ವಾಮಿ, ಕೇಂದ್ರ ಕೃಷಿ ಸಚಿವರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

**ಶಿವರಾಜ್ ಸಿಂಗ್ ಚೌಹಾಣ್ ಪ್ರತಿಕ್ರಿಯೆ, ಕೇಂದ್ರ ತಂಡ ರಚನೆ:** ಸೆಪ್ಟೆಂಬರ್ 29ರಂದು ಕೇಂದ್ರ ಕೃಷಿ ಸಚಿವರು ಕುಮಾರಸ್ವಾಮಿ ಅವರಿಗೆ ಪತ್ರ ಬರೆದು, ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಕೇಂದ್ರದ ಮೌಲ್ಯಮಾಪನ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಓಆಖಈ ನಿಂದ ಆರ್ಥಿಕ ನೆರವು ಕೋರಿ ಕರ್ನಾಟಕ ಸರ್ಕಾರವು ಮನವಿ ಪತ್ರವನ್ನು ಸಲ್ಲಿಸಿದೆ ಮತ್ತು ಆ ಮನವಿ ಸ್ವೀಕರಿಸಿದ ತಕ್ಷಣವೇ, ಅಂ–ದರೆ ಸೆಪ್ಟೆಂಬರ್ 17 ರಂದು ಅಂತರ–ಸಚಿವಾಲಯದ ಕೇಂದ್ರ ತಂಡವನ್ನು ರಚಿಸಲಾಗಿದೆ ಎಂದು ಕೃಷಿ ಸಚಿವರು ತಿಳಿಸಿದ್ದಾರೆ.

**ಅಕ್ಟೋಬರ್ 3ರಿಂದ ಅಕ್ಟೋಬರ್ 7ರವರೆಗೆ ರಾಜ್ಯಕ್ಕೆ ಕೇಂದ್ರದ ತಂಡ:** ಬರಪೀಡಿತ ಪ್ರದೇಶಗಳ ಸ್ಥಳ ಪರಿಶೀಲನೆಗಾಗಿ ಈ ತಂಡವು ಅಕ್ಟೋಬರ್ 3ರಿಂದ ಅಕ್ಟೋಬರ್ 7ರವರೆಗೆ ಕರ್ನಾಟಕಕ್ಕೆ ಭೇಟಿ ನೀಡಲಿದೆ. "ಬರಪೀಡಿತ ಪ್ರದೇಶಗಳ ಸ್ಥಳ ಪರಿಶೀಲನೆ ನಡೆಸಲು ಮತ್ತು ಚಾಲ್ತಿಯಲ್ಲಿರುವ ನಿಯಮಗಳು ಹಾಗೂ ಮಾರ್ಗಸೂಚಿಗಳ ಪ್ರಕಾರ ವರದಿಯನ್ನು ಸಲ್ಲಿಸಲು IMCT ತಂಡವು ರಾಜ್ಯಕ್ಕೆ 03.10.2026 ರಿಂದ 07.10.2026 ರವರೆಗೆ ಭೇಟಿ ನೀಡಲಿದೆ," ಎಂದು ಚೌಹಾಣ್ ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ.

## ಬಿಜೆಪಿಗಿಂತ ಕಾಂಗ್ರೆಸ್ ಸರ್ಕಾರದಲ್ಲೇ ಕಮಿಷನ್ ಕಾಟ ಹೆಚ್ಚು

**ಬೆಂಗಳೂರು:** ರಾಜ್ಯ ಸರ್ಕಾರದ ವಿರುದ್ಧ ಮತ್ತೆ ಸಿಡಿದೆದ್ದ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ, ಕಳೆದ ನಾಲ್ಕು ವರ್ಷದಿಂದ ಬಿಲ್ ಪಾವತಿಯಾಗದೆ 1.5 ಲಕ್ಷ ಗುತ್ತಿಗೆದಾರರು ಪರದಾಡುತ್ತಿದ್ದಾರೆ. 8 ಇಲಾಖೆಯಲ್ಲಿ ಸುಮಾರು 38 ಸಾವಿರ ಕೋಟಿ ಹಣ ಬಾಕಿ ಇದೆ ಎಂದು ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು ಬುಧವಾರ ಹೇಳಿದ್ದಾರೆ. ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಮಂಜುನಾಥ್ ಅವರು, ಬಾಕಿ ಬಿಲ್ ಪಾವತಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದು, ನವೆಂಬರ್ ಒಳಗೆ ಬಾಕಿ ಹಣ ಬಿಡುಗಡೆ ಮಾಡದಿದ್ದರೆ ಕಮಿಷನ್ ದಂಧೆಯ ದಾಖಲೆ ಬಿಡುಗಡೆ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ಕಾಂಗ್ರೆಸ್ ಸರ್ಕಾರದಲ್ಲಿ ಕಳೆದ ಸರ್ಕಾರಕ್ಕಿಂತಲೂ ಕಮಿಷನ್ ಹೆಚ್ಚಾಗಿದ್ದು, ಅದು ಎಷ್ಟು ಪರ್ಸೆಂಟೇಜ್ ಅಂತ ಕೇಳಬೇಡಿ ಎಂದು ಗುತ್ತಿಗೆದಾರ ಸಂಘದ ಅಧ್ಯಕ್ಷ ಮಂಜುನಾಥ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

**ಶೇ.70 ರಷ್ಟು ಶಾಸಕರಿಂದ ಕಮಿಷನ್ ಕಾಟ:** ಇತ್ತೀಚಿಗೆ ಶಾಸಕರು ಸಹ ಗುತ್ತಿಗೆದಾರರ ವಿಚಾರದಲ್ಲಿ ಮೂಗು ತೂರಿಸುತ್ತಿದ್ದಾರೆ. ಟೆಂಡರ್ ಆದ್ರೆ ಶಾಸಕರ ಬಳಿ ಮೊದಲು ಹೋಗಬೇಕು. ಅವರು ಓಕೆ ಅಂದಮೇಲೆ ಕಾಮಗಾರಿ ಶುರು ಆಗುತ್ತೆ. ಈ ವಿಚಾರ ಸಿಎಂಗೂ ಗೊತ್ತಿದೆ ಎಂದರು. ಹಿಂದೆ ಚುನಾವಣೆ ಬಂದಾಗ ಮಾತ್ರ ದುಡ್ಡು ಕೇಳುತ್ತಿದ್ದರು. ಆದರೆ ಈಗ ಶೇ. 70ರಷ್ಟು ಶಾಸಕರು ಪ್ರತಿಯೊಂದು ಕಾಮಗಾರಿಯಲ್ಲೂ ಮೂಗು ತೂರಿಸುತ್ತಿದ್ದಾರೆ. ಟೆಂಡರ್ ಮಂಜೂರಾದ ತಕ್ಷಣ ಶಾಸಕರ ಬಳಿ ಹೋಗಬೇಕು, ಪೇಮೆಂಟ್ ಆದ ತಕ್ಷಣ ಅವರಿಗೆ ಪಾಲು ತಲುಪಿಸಬೇಕು. ಅಧಿಕಾರಿಗಳು ಹಾಗೂ ಮಧ್ಯವರ್ತಿಗಳ ಮೂಲಕ ಕಮಿಷನ್‌ಗೆ ಪೀಡಿಸುತ್ತಿದ್ದಾರೆ ಎಂದು ಆರೋಪಿಸಿದರು. ಸಚಿವರಿಗೂ ಕಮಿಷನ್ ಹೋಗುತ್ತಿದೆ. ಹೊಸ ಸಚಿವರಿಗೆ ಪೇಮೆಂಟ್ ಇನ್ನೂ ತಲುಪಿಲ್ಲ. ಸತೀಶ್ ಜಾರಕಿಹೊಳಿ ಅವರ ಇಲಾಖೆ ಹಾಗೂ ಬಿಬಿಎಂಪಿ ಹೊರತುಪಡಿಸಿದರೆ ಉಳಿದೆಲ್ಲಾ ಇಲಾಖೆಗಳಲ್ಲಿ ಕಮಿಷನ್ ವಹಿವಾಟು ಎಗ್ಗಿಲ್ಲದೆ ಸಾಗಿದೆ ಎಂದು ದೂರಿದರು.

## ಪ್ರಜಾಪ್ರಭುತ್ವ ಉಳಿಸಿ ನಡಿಗೆ ಘೋಷಣೆ

### ಇಂಡಿಯಾ ಮೈತ್ರಿಕೂಟದ ಸಭೆ | ಮೋದಿ, ಅಮಿತ್ ಶಾ, ಜ್ಞಾನೇಶ ರಾಜೀನಾಮೆಗೆ ಆಗ್ರಹ

**ದೆಹಲಿ:** ಸಾಂಸ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿರುವ ಚುನಾವಣಾ ಆಯೋಗ ಈಗ ಪ್ರತಿಪಕ್ಷಗಳ ಇಂಡಿಯಾ ಮೈತ್ರಿಕೂಟದ ಭಾರೀ ವಿರೋಧವನ್ನು ಎದುರಿಸಲಿದೆ. ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಇಂದು (ಸೆ.30–ಬುಧವಾರ) ನಡೆದ ಇಂಡಿಂ–ಯಾ ಮೈತ್ರಿಕೂಟದ ಸಭೆಯಲ್ಲಿ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮವನ್ನು ವಿರೋಧಿಸಿ, ದೇಶಾದ್ಯಂತ "ಪ್ರಜಾಪ್ರಭುತ್ವ ಉಳಿಸಿ ನಡಿಗೆ"ಯನ್ನು ಘೋಷಣೆ ಮಾಡಲಾಗಿದೆ.

ಚುನಾವಣಾ ಆಯೋಗದ ಮೇಲೆ ಸರ್ಕಾರದ ನಿಯಂತ್ರಣವಿದೆ ಎಂದು ಆರೋಪಿಸಿರುವ ಇಂಡಿಯಾ ಮೈತ್ರಿಕೂಟ, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಹೋರಾಟ ನಡೆಸುವುದಾಗಿ ಹೇಳಿದೆ. ಪ್ರಜಾಪ್ರಭುತ್ವದ ರಕ್ಷಣೆಯೇ ತಮ್ಮ ಗುರಿ ಎಂದು ಮೈತ್ರಿಕೂಟದ ನಾಯಕರು ಹೇಳಿದ್ದಾರೆ.

ಸಭೆಯಲ್ಲಿ ಒಟ್ಟು ಆರು ನಿರ್ಣಯಗಳಿಗೆ ಸರ್ವಾನುಮತದ ಅಂಗೀಕಾರ ದೊರೆತಿದ್ದು, ಅವುಗಳ ಆಧಾರದ ಮೇಲೆಯೇ ಪ್ರಜಾಪ್ರಭುತ್ವ ಉಳಿಸಿ ನಡಿಗೆ ಹೋರಾಟ ಆರಂಭಿಸುವುದಾಗಿ ಇಂಡಿಯಾ ಮೈತ್ರಿಕೂಟ ಸ್ಪಷ್ಟಪಡಿಸಿದೆ. ಸಭೆಯ ಬಳಿಕ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಸಭೆಯಲ್ಲಿ ಕೈಗೊಂಡ ಆರು ನಿರ್ಣಯಗಳ ಬಗ್ಗೆ ಮಾಹಿತಿ ನೀಡಿದರು.

ಇಂಡಿಯಾ ಮೈತ್ರಿಕೂಟದ ನಾಯಕರು ಸಭೆ ಸೇರಿ ಈ ಕೆಳಗಿನ ಆರು ಅಂಶಗಳ ಬಗ್ಗೆ ಒಪ್ಪಿಕೊಂಡರು.

ರಾಹುಲ್ ಗಾಂಧಿ ರೋಷಾಗ್ನಿ:

ಸಭೆಯ ಬಳಿಕ ಂಆಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. "ಈ ಮೂವರೂ ಸೇರಿ ಪ್ರಜಾಪ್ರಭುತ್ವದ ಮೇಲೆ ಸವಾರಿ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವಕ್ಕಿಂತ ಯಾರೂ ದೊಡ್ಡವರಲ್ಲ ಎಂಬ ಸತ್ಯವನ್ನು ನಾವು ಇವರಿಗೆ ತೋರಿಸಿ ಕೊಡುತ್ತೇವೆ. ಎಸ್‌ಐಆರ್ ಎಂಬ ಅಕ್ರಮದ ಮೂಲಕ ಲೋಕತಂತ್ರಕ್ಕೆ ಪೆಟ್ಟು ನೀಡಿರುವ ಈ ಮೂವರಿಗೆ, ಶಿಕ್ಷೆ ಕೊಡಿಸುವುದೇ ನಮ್ಮ ಗುರಿ" ಎಂದು ರಾಹುಲ್ ಗಾಂಧಿ ಗುಡುಗಿದರು.

### ಆರು ನಿರ್ಣಯ ಮಂಡನೆ

1. ಅಕ್ಟೋಬರ್ 2ರಿಂದ 8ರವರೆಗೆ, ಜಿಲ್ಲಾ ಮಟ್ಟದ "ಪ್ರಜಾಪ್ರಭುತ್ವ ಉಳಿಸಿ" ಮೆರವಣಿಗೆಗಳು ನಡೆಯಲಿವೆ.
2. ಅಕ್ಟೋಬರ್ 6ರಂದು, ಎಲ್ಲಾ ವಿರೋಧ ಪಕ್ಷದ ಸಂಸದರು ಚುನಾವಣಾ ಆಯೋಗದ ಕಚೇರಿಗೆ ಮೆರವಣಿಗೆ ನಡೆಸಲಿದ್ದಾರೆ.
3. ಅಕ್ಟೋಬರ್ ಎರಡನೇ ವಾರದಲ್ಲಿ ವಿರೋಧ ಪಕ್ಷದ ನಾಯಕರು ಭಾರತದ ರಾಷ್ಟ್ರಪತಿಗಳ ಭೇಟಿಗೆ ಸಮಯಾವಕಾಶ ಪಡೆಯಲಿದ್ದಾರೆ.
4. ವಿರೋಧ ಪಕ್ಷಗಳಿಂದ ಐದು ಮೆಗಾ ಸಮಾವೇಶಗಳು ನಡೆಯಲಿವೆ.
5. ನವೆಂಬರ್ 1ರಂದು, ದೆಹಲಿಯಲ್ಲಿ ಬೃಹತ್ ಸಮಾವೇಶ.
6. ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇರುವ ಎಸ್‌ಐಆರ್ ಮತ್ತು ಚುನಾವಣಾ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳ ಆರಂಭಿಕ ಇತ್ಯರ್ಥಕ್ಕಾಗಿ ಮನವಿ.




### ಗದ್ದಾರ್ ಜ್ಞಾನೇಶ್ ಬರಹ 20 ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕೊಲೆ ಯತ್ನ ಕೇಸ್

ನವದೆಹಲಿ: ಎಸ್‌ಐಆರ್ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಜ್ಞಾನೇಶ್ ಕುಮಾರ್ ವಿರುದ್ಧ ವಿರೋಧ ಪಕ್ಷಗಳು ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿರುವ ನಡುವೆಯೇ ಅವರ ಮನೆಯ ಗೋಡೆಯ ಮೇಲೆ ಗದ್ದಾರ್ ಜ್ಞಾನೇಶ್ ಎಂಬ ಬರಹ ಬರೆಯಲಾಗಿದೆ.

ಪ್ರತಿಭಟನೆಯ ಸಂದರ್ಭದಲ್ಲಿ ಜ್ಞಾನೇಶ್ ಕುಮಾರ್ ಅವರ ನಿವಾಸವನ್ನು ವಿರೂಪಗೊಳಿಸಿದ ಆರೋಪದ ಮೇಲೆ 20 ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕೊಲೆ ಯತ್ನ, ಸ್ವಯಂಪ್ರೇರಣೆಯಿಂದ ತೀವ್ರ ಗಾಯಗೊಳಿಸುವುದು ಮತ್ತು ಗಲಭೆ ಉಂಟುಮಾಡುವುದು ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ಬುಧವಾರ ತಿಳಿಸಿವೆ. ಈ ಸಂಬಂಧ ಇಬ್ಬರು ಕಾಂಗ್ರೆಸ್ ನಾಯಕರು ಸೇರಿದಂತೆ ಆರು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

# ಹೊಸ ಪಿಎಫ್ ನೀತಿ ವಿರೋಧಿಸಿ ಶಾಹಿ ಗಾರ್ಮೆಂಟ್ಸ್ ಕಾರ್ಮಿಕರ ಪ್ರತಿಭಟನೆ

## ಹಳೆ ಪಿಎಫ್ ನಿಯಮ ಮುಂದುವರಿಸುವಂತೆ ಆಗ್ರಹ । 5 ತಾಸು ರಸ್ತೆ ತಡೆಗೆ ಸಂಚಾರ ಅಸ್ತವ್ಯಸ್ತ, ವಿದ್ಯಾರ್ಥಿಗಳು– ಸಾರ್ವಜನಿಕರು ಪರದಾಟ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಪಿಎಫ್ ನೀತಿಯನ್ನು ವಿರೋಧಿಸಿ ಪಟ್ಟಣದ ಶಾಹಿ ಗಾರ್ಮೆಂಟ್ಸ್ ಉದ್ಯೋಗಿಗಳು ಬುಧವಾರ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ರಸ್ತೆ ಹಾಗೂ ಬಸ್ ತಡೆ ನಡೆಸಿದರು. ಏಕಾಏಕಿ ನಡೆದ ರಸ್ತೆ ತಡೆಯಿಂದ ವಾ ಹನ ಸಂಚಾರ ಅಸ್ತವ್ಯಸ್ತಗೊಂಡು, ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ವಾಹನ ಸವಾರರು ಕೆಲಕಾಲ ಪರದಾಡುವಂತಾಯಿತು.

ಪಟ್ಟಣದ ಶಾಹಿ ಗಾರ್ಮೆಂಟ್ಸ್ ಆವರಣದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ಸಾವಿರಾರು ಕಾರ್ಮಿಕರು ಗುಮ್ಮನಹಳ್ಳಿ ರಸ್ತೆ, ಬೀರೇಶ್ವರ ದೇವಸ್ಥಾನ ಮಾರ್ಗವಾಗಿ ಬಸ್ ನಿಲ್ದಾಣದ ಬಳಿಗೆ ಆಗಮಿಸಿದರು. ಬಳಿಕ ಹಳೆ ಪುರಸಭೆ ಎದುರು ರಸ್ತೆಯಲ್ಲಿ ಕುಳಿತು ಕೇಂದ್ರ ಸರ್ಕಾರದ ಹೊಸ ಪಿಎಫ್ ನೀತಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹಳೆ ನಿಯಮ ಮುಂದುವರಿಸಿ:ಹೊಸ ಪಿಎಫ್ ನಿಯಮದಿಂದ ಕಾರ್ಮಿಕರಿಗೆ ಹಲವು ರೀತಿಯಲ್ಲಿ ತೊಂದರೆಯಾಗಲಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು,ಏಕಾಏಕಿ ಹೊಸ ನಿಯಮಗಳನ್ನು ಜಾರಿಗೊಳಿಸುವ ಬದಲು ಈ ಹಿಂದೆ ಜಾರಿಯಲ್ಲಿದ್ದ ಪಿಎಫ್ ನಿಯಮವನ್ನೇ ಮುಂದುವರಿಸಬೇಕು ಎಂದು ಒತ್ತಾಯಿಸಿದರು.

**ಜೀವನ ದುಸ್ತರವಾಗಿದೆ:** ಬೆಲೆ ಏರಿಕೆಯಿಂದ ಬಡ ಹಾಗೂ ಮಧ್ಯಮ ವರ್ಗದ ಜನರ ಬದುಕು ಈಗಾಗಲೇ ದುಸ್ತರವಾಗಿದೆ. ನಮ್ಮ ದುಡಿಮೆಯ ಹಣದಲ್ಲಿ ಭವಿಷ್ಯದ ಭದ್ರತೆಗಾಗಿ ಪಿಎಫ್ ರೂಪದಲ್ಲಿ ಉಳಿಸುವ ಮೊತ್ತವನ್ನು ಪಡೆಯಲು ಮತ್ತೆ ಷರತ್ತುಗಳನ್ನು ವಿಧಿ ಸಿದರೆ ಕಾರ್ಮಿಕರ ಬದುಕಿಗೆ ಮತ್ತಷ್ಟು ತೊಂದರೆಯಾಗಲಿದೆ. ಸಕಾಲಕ್ಕೆ ಸಿಗಬೇಕಾದ ಪಿಎಫ್ ಹಣವನ್ನು ಪಡೆಯಲು ಅನ ಗತ್ಯ ನಿಬರ್ಂಧಗಳನ್ನು ವಿಧಿಸಬಾರದು ಎಂದು ಮಹಿಳಾ ಕಾರ್ಮಿಕರು ಆಗ್ರಹಿಸಿದರು.

**ಭವಿಷ್ಯಕ್ಕೆಕುತ್ತು:**ಉದ್ಯೋಗಿ ಸುಧಾ ತಾಳೇರ ಮಾತನಾಡಿ,ಕಷ್ಟಪಟ್ಟು ದುಡಿಯುವ ಕಾರ್ಮಿಕರಿಗೆ ಪಿಎಫ್ ಹಣವೆಂದರೆ ಭವಿಷ್ಯದ ಆಸರೆ. ತುರ್ತು ಸಂದರ್ಭದಲ್ಲಿ ಈ ಹಣದ ಅವಶ್ಯಕತೆ ಇರುತ್ತದೆ. ಹೀಗಿರುವಾಗ ಪಿಎಫ್ ಪಡೆಯುವುದಕ್ಕೆ ಹೊಸ ಹೊಸ ಷರತ್ತು ಗಳನ್ನು ವಿಧಿಸುವುದು ಕಾರ್ಮಿಕರಿಗೆ ಹೊರೆಯಾಗಲಿದೆ. ಕೇಂದ್ರ ಸರಕಾರ ಕೂಡಲೇ ಹೊಸ ನಿಯಮವನ್ನು ಮರುಪರಿಶೀಲಿಸಿ ಹಳೆ ವ್ಯವಸ್ಥೆಯನ್ನು ಮುಂದುವರಿಸಬೇಕು ಎಂದು ಒತ್ತಾಯಿಸಿದರು.

**ರಸ್ತೆ ತಡೆಗೆ ಸಂಚಾರ ಅಸ್ತವ್ಯಸ್ತ:** ಕಾರ್ಮಿಕರು ಬಸ್ ನಿಲ್ದಾಣದ ಸಮೀಪ ರಸ್ತೆಯಲ್ಲೇ ಕುಳಿತು ಪ್ರತಿಭಟನೆ ನಡೆಸಿದ್ದರಿಂದ ಬಸ್‌ಗಳು ಸೇರಿದಂತೆ ವಿವಿಧ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು. ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಕೆಲಕಾಲ ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು. ಶಾಲಾ–ಕಾಲೇಜುಗಳಿಗೆ ತೆರಳುತ್ತಿದ್ದ ವಿದ್ಯಾರ್ಥಿಗಳು, ಕೆಲಸ ಕಾರ್ಯಗಳಿಗೆ ತೆರಳುತ್ತಿದ್ದ ಸಾರ್ವಜನಿಕರು ಹಾಗೂ ಪ್ರಯಾಣಿಕರು ತೊಂದರೆ ಅನುಭವಿಸಿದರು.

ಮಾಜಿ ಶಾಸಕ ಸುರೇಶಗೌಡ ಪಾಟೀಲ ಮನವಿ:ಸ್ಥಳಕ್ಕೆ ಮಾಜಿ ಶಾಸಕ ಸುರೇಶಗೌಡ ಪಾಟೀಲ ಆಗಮಿಸಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು. ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೊಂದರೆ–ಯಾಗದಂತೆ ರಸ್ತೆ ತಡೆ ಕೈಬಿಟ್ಟು ತಮ್ಮ ಬೇಡಿ ಕೆಗಳನ್ನು ಸಂಬಂಧಿಸಿದ ಅಧಿಕಾರಿಗಳು ಹಾಗೂ ಸರಕಾರದ ಗಮನಕ್ಕೆ ತರುವಂತೆ ಉದ್ಯೋಗಿಗಳಿಗೆ ಮನವಿ ಮಾಡಿದರು. ಆದರೆ ಪ್ರತಿಭಟನಾಕಾರರು ತಮ್ಮ ಬೇಡಿಕೆಗಳ ಕುರಿತು ಸ್ಪಷ್ಟ ಭರವಸೆ ದೊರೆಯುವವರೆಗೆ ಪ್ರತಿಭಟನೆ ಕೈಬಿಡಲ್ಲ ಎಂದು ಪಟ್ಟು ಹಿಡಿದರು.

ಸ್ಥಳಕ್ಕೆ ಪಿಎಫ್ ಅಧಿಕಾರಿಗಳು:ಪ್ರತಿಭಟನೆ ಸುದ್ದಿ ತಿಳಿದು ದಾವಣಗೆರೆಯಿಂದ ಆಗಮಿಸಿದ ಪಿಎಫ್ ಅಧಿಕಾರಿ ರಾಘವೇಂದ್ರ ಹಾಗೂ ಇತರರು ಇದು ಕೇಂದ್ರ ಸರಕಾರ ಮಾಡಿರುವ ಕಾನೂನು ಇದರ ಬಗ್ಗೆ ಮಾತುಕತೆ ನಡೆದಿದೆ ಆದ್ದರಿಂದ ತಾಳ್ಮೆ ವಹಿಸಿ ಶೀಘ್ರ ದಲ್ಲೇ ಸಮಸ್ಯೆ ಪರಿಹರಿಸುವ ಭರವಸೆ ನೀಡಿದ ನಂತರ ಪ್ರತಿಭಟನೆ ಕೈಡಲಾಯಿತು. ಈ ವೇಳೆ ಸಾವಿರಾರು ಮಹಿಳೆಯರು ಉಪಸ್ಥಿತರಿದ್ದರು.



### ಪೊಲೀಸರ ಹರಸಾಹಸ

**ಪ್ರತಿಭಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಸ್ಥಳೀಯ ತಹಸೀಲ್ದಾರ, ಸಿಪಿಐ ಎಂ.ಬಿ.ಚಿಕ್ಕಣ್ಣವರ, ಪಿಎಸ್‌ಐ ಭಾರತಿ ಕುರಿ ಹಾಗೂ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಹರಸಾಹಸ ಪಟ್ಟರು. ರಸ್ತೆ ತಡೆಯಿಂದ ಸಾರ್ವಜನಿಕರಿಗೆ ಉಂಟಾಗುತ್ತಿದ್ದ ತೊಂದರೆಯನ್ನು ಮನವರಿಕೆ ಮಾಡಿಕೊಟ್ಟು ಪ್ರತಿಭಟನೆ ಹಿಂಪಡೆಯುವಂತೆ ಮನವಿ ಮಾಡಿದರು. ಆದರೂ ಪ್ರತಿಭಟನಕಾರರು ತಮ್ಮ ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರಿಸಿದರು.**

---

# ಮಕ್ಕಳಿಗೆ ಸಂಸ್ಕಾರ ಕಲಿಸುವ ಅವಶ್ಯಕತೆ ಇದೆ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ಇಂದಿನ ದಿನಗಳಲ್ಲಿ ಮಕ್ಕಳಿಗೆ ಸಂಸ್ಕಾರ ಕಲಿಸುವುದು, ಹಿರಿಯರನ್ನು ಗೌರವಿಸುವುದು ಹಾಗೂ ಮನೆಯನ್ನು ಸಂಸ್ಕಾರದ ಕೇಂದ್ರವನ್ನಾಗಿ ರೂಪಿಸುವ ಅಗತ್ಯವಿದೆ ಎಂದು ವಿರಾಟ ಹಿಂದೂ ಪರಿಷತ್ ಹಾಗೂ ಭಜರಂಗದಳ ಧಾರವಾಡ ವಿಭಾಗದ ಸಂಯೋಜಕ ಅನಿಲ ಹಲವಾಗಲ ಹೇಳಿದರು.

ನಗರದ ಸಂಗಮ ವೃತ್ತದಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳ ವತಿಯಿಂದ ಪ್ರತಿಷ್ಠಾಪಿಸಲಾಗಿರುವ ಮಹಾಗಣಪತಿ ಉತ್ಸವದ ಅಂಗವಾಗಿ ಸಾಂಸ್ಕೃತಿಕ ಹಾಗೂ ಧರ್ಮಸಭೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇಶದಲ್ಲಿ ಜಾತಿ ವ್ಯವಸ್ಥೆ ಹೋಗಲಾಡಿಸಿ ಜನರನ್ನು ಒಗ್ಗೂಡಿಸುವ ಉದ್ದೇಶದಿಂದ ಬಾಲಗಂಗಾಧರ ತಿಲಕರು ಸಾಮೂಹಿಕ ಗಣೇಶೋತ್ಸವಕ್ಕೆ ಚಾಲನೆ ನೀಡಿದರು. ಎಲ್ಲಾ ಗಣೇಶೋತ್ಸವಗಳು ಹಿಂದೂ ಜಾಗೃತಿಯ ಸಂಕೇತವಾಗಿದ್ದು, ಸ್ವಂತ ಎನ್ನುವುದಕ್ಕಿಂತ ಎಲ್ಲವೂ ನಮ್ಮದು ಎಂಬ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ರಾಣೇಬೆನ್ನೂರಿನಲ್ಲಿ ಈ ಹಿಂದೆ ಹೆಚ್ಚಿನ ಸಂಖ್ಯೆಯ ಕಸಾಯಿಖಾನೆಗಳಿದ್ದವು. ಭಜರಂಗದಳದ ಹೋರಾಟದಿಂದ 52 ಕಸಾಯಿಖಾನೆಗಳು ಬಂದ್ ಆಗಿವೆ. ಹಿಂದೂ ಸಮಾಜದ ಸಹೋದರಿಯರ ರಕ್ಷಣೆ ಹಾಗೂ ಗೋಹತ್ಯೆ ನಿಷೇಧದಂತಹ ವಿಷಯಗಳ ಕುರಿತು ಹೋರಾಟ ನಡೆಸಿದ ಸಂದರ್ಭದಲ್ಲಿ ಕಾರ್ಯಕರ್ತರ ಮೇಲೆ ಪ್ರಕರಣಗಳು ದಾಖಲಾಗಿವೆ. ಸಂಘಟನೆ ಯಾವುದೇ ಅಕ್ರಮ ಚಟುವಟಿಕೆಗಳಿಗೆ ಬೆಂಬಲ ನೀಡುವುದಿಲ್ಲ. ದೇಶ ಮೊದಲು ಎಂಬ ಭಾವನೆಯೊಂದಿಗೆ ಧರ್ಮದ ಸೇವೆ ಮಾಡುವುದು ನಮ್ಮ ಉದ್ದೇಶ ಎಂದರು.

ಕಾನೂನು ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು. ಗಣೇಶೋತ್ಸವ ಸಂದರ್ಭದಲ್ಲಿ ಮಾತ್ರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬದಲು ವರ್ಷವಿಡೀ ಎಲ್ಲರಿಗೂ ಒಂದೇ ರೀತಿಯಲ್ಲಿ ಕಾನೂನು ಪಾಲನೆಯಾಗಬೇಕು. ಧಾರ್ಮಿಕ ಆಚರಣೆಗಳ ವಿಚಾರದಲ್ಲಿ ಪೊಲೀಸ್ ಅಧಿಕಾರಿಗಳು ಎಲ್ಲ ಸಮುದಾಯಗಳನ್ನೂ ಸಮಾನವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಹಿಂದೂ ಸಮಾಜ ಯಾವುದೇ ರಾಜಕೀಯ ಪಕ್ಷ ಅಥವಾ ವ್ಯಕ್ತಿಗೆ ಸೀಮಿತವಾಗಿಲ್ಲ. ನಮ್ಮ ಬೆಂಬಲ ಹಿಂದೂ ಸಮಾಜಕ್ಕೆ ಮಾತ್ರ. ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣವಾಗಲು ಹಿಂದೂ ಸಮಾಜದ ಒಗ್ಗಟ್ಟು ಪ್ರಮುಖ ಕಾರಣವಾಗಿದೆ. ಗಣೇಶೋತ್ಸವ ಹಾಗೂ ಶೋಭಾಯಾತ್ರೆ ಯಾರ ವಿರುದ್ಧವೂ ಅಲ್ಲ, ಸಮಾಜದ ಒಗ್ಗಟ್ಟನ್ನು ಪ್ರದರ್ಶಿಸುವ ಉದ್ದೇಶದಿಂದ ಆಚರಿಸಲಾಗುತ್ತಿದೆ. ಇದಕ್ಕೆ ಪ್ರತಿಯೊಬ್ಬರ ಸಹಕಾರ ಅಗತ್ಯವಿದೆ ಎಂದರು.

ಅ.02ರಂದು ವಿವಿಧ ಕಲಾತಂಡಗಳು ಹಾಗೂ ಡಿಜೆಯೊಂದಿಗೆ ಗಣೇಶನ ಬೃಹತ್ ಶೋಭಾಯಾತ್ರೆ ನಡೆಯಲಿದೆ. ಇದ–ಕ್ಕೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಹಕಾರ ನೀಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂ ಸಮಾಜದವರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪ್ರಾಸ್ತಾವಿಕವಾಗಿ ಭಜರಂಗದಳ ಜಿಲ್ಲಾ ಸಹ ಸಂಯೋಜಕ ವಿನಯಗೌಡ ಬಾಳನಗೌಡ್ರ ಮಾತನಾಡಿ, ಪ್ರಸಕ್ತ ವರ್ಷ 14ನೇ ವರ್ಷದ ಗಣೇಶೋತ್ಸವ ಆಚರಿಸಲಾಗುತ್ತಿದ್ದು, ಇದು ಕೇವಲ ವ್ಯಕ್ತಿ ಪೂಜೆಗೆ ಸೀಮಿತವಾದ ಉತ್ಸವವಲ್ಲ. ಸಂಘಟನೆ, ಸಂಘರ್ಷ ಹಾಗೂ ಸೇವಾ ಮನೋಭಾವದೊಂದಿಗೆ ಗಣೇಶ ಪ್ರತಿಷ್ಠಾಪಿಸಲಾಗಿದೆ. ಎಲ್ಲ ಹಿಂದೂಗಳ ಗಣೇಶೋತ್ಸವವಾಗಿ ಆಚರಿಸಲಾಗುತ್ತಿದ್ದು, ತಾಲೂಕಿನ ಜನತೆಯ ಸಹಕಾರದಿಂದ ಅ.2ರಂದು ಬೃಹತ್ ಗಣೇಶ ಶೋಭಾಯಾತ್ರೆ ನಡೆಯಲಿದ್ದು, ಯಾವುದೇ ಮಾರ್ಗ ಬದಲಾವಣೆ ಇರುವುದಿಲ್ಲ. ಡಿಜೆಯೊಂದಿಗೆ ಮೆರವಣಿಗೆ ನಡೆಯಲಿದೆ ಎಂದರು.

ಕಾನೂನು ಎಲ್ಲರಿಗೂ ಒಂದೇ ಆಗಿದ್ದು,ಸಂವಿಧಾನಕ್ಕೆ ಎಲ್ಲರೂ ಗೌರವ ನೀಡಬೇಕು. ಧರ್ಮದ ರಕ್ಷಣೆ ಹಾಗೂ ಸೇವೆಯ ಉದ್ದೇಶದಿಂದ ಸಂಘಟನೆ ಕಾರ್ಯನಿರ್ವಹಿಸುತ್ತಿದೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಯಾವುದೇ ಪ್ರಯತ್ನ ನಡೆದರೂ ಅದರ ವಿರುದ್ಧ ಹೋರಾಟ ನಡೆಸಲಾಗುವುದು. ಗಣೇಶೋತ್ಸವ ಸಂದರ್ಭದಲ್ಲಿ ಅಧಿಕಾರಿಗಳು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಾಂತಿ, ಸೌಹಾರ್ದತೆಯಿಂದ ಹಬ್ಬ ಆಚರಣೆಗೆ ಅವಕಾಶ ಮಾಡಿಕೊಡಬೇಕು ಎಂದರು.

ರಾಜು ರೇವಣಕರ, ಮೌನೇಶ ಬಡಿಗೇರ, ವಿನೋದ ಉದಗಟ್ಟಿ, ರಮೇಶ ಮಾಕನೂರು, ಸಚಿನ್ ಶಿಂಧೆ, ತಾಲೂಕು ಸಂಚಾಲಕ ನಾಗರಾಜ ಕೊರವರ, ಬಸವರಾಜ ಉಪ್ಪಾರ, ಚಂದ್ರು ಮುದೇನೂರು, ಅನಿಲ ಮಳವಳ್ಳಿ, ಕೇಶವ ಹೆದ್ದೇರಿ, ಶಶಿ ಬಳ್ಳಾರಿ, ಬಿರೇಶ ಗುದಿಗೇರ, ಶರತ್ ನೂಲಗೇರಿ, ನಾಗರಾಜ ಕಲಾಲ, ಮಂಜು ಉಪ್ಪಾರ,ಕಿಶೋರ ಬಗಾಡಿ, ಮಯೂರ ಬಂಡಾರಿ, ಸಂಧೀಪ ಕುಡೇಕರ್ ಸೇರಿದಂತೆ ಸಂಘಟನೆಯ ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



---

# ಆರ್‌ಟಿಇಎಸ್ ಪಿಯು ಕಾಲೇಜಿನ 54 ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ

## ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಅಮೋಘ ಸಾಧನೆ । ರಾಣೇಬೆನ್ನೂರು ತಾಲೂಕಿಗೆ ಕೀರ್ತಿ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ಹಾವೇರಿಯಲ್ಲಿ ಇತ್ತೀಚೆಗೆ ನಡೆದ 2026–27ನೇ ಸಾಲಿನ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ನಗರದ ಆರ್‌ಟಿಇಎಸ್ ಪಿಯು ಕಾಲೇಜಿನ ಸುಮಾರು 54 ವಿದ್ಯಾರ್ಥಿಗಳು ವಿವಿಧ ಕ್ರೀಡಾ ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ವೈಯಕ್ತಿಕ ವಿಭಾಗದಲ್ಲಿ ನಾಗರಾಜ್ ಪೂಜಾರ್ ವೇಗದ ನಡಿಗೆಯಲ್ಲಿ, ನಿಶಾ ಲಮಾಣಿ ಹಾಗೂ ನಯನ ಅಂಗಡಿ ಗುಡ್ಡಗಾಡು ಓಟದಲ್ಲಿ, ಹರ್ಷಿತಾ ಉದ್ದಜಿಗಿತ ಹಾಗೂ 100 ಮೀಟರ್ ಹರ್ಡಲ್ಸ್‌ನಲ್ಲಿ, ತೇಜಸ್ವಿನಿ ಪಾಟೀಲ್ ಪೋಲ್ ವಾಲ್ಟ್‌ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಹರ್ಷಿತಾ 4400 ಮೀಟರ್ ರಿಲೇಯಲ್ಲಿಯೂ ಪ್ರಥಮ ಸ್ಥಾನ ಗಳಿಸಿದ್ದಾರೆ.

ಕುಸ್ತಿ ವಿಭಾಗದಲ್ಲಿ ಮನು ಸಾಲಗೇರಿ (57 ಕೆ.ಜಿ.), ಯಶವಂತ್ ದೇವರಗುಡ್ಡ (60 ಕೆ.ಜಿ.), ಸೋಮರಾಜ್ (70 ಕೆ.ಜಿ.), ಗಗನ್ ದೊಡ್ಡಕುರುಬರ (67 ಕೆ.ಜಿ.) ಹಾಗೂ ಕಿರಣ್ ಗುತ್ತಲ್ (90 ಕೆ.ಜಿ.) ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಗುಂಪು ಕ್ರೀಡೆಗಳಲ್ಲಿಯೂ ಕಾಲೇಜಿನ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ಬಾಲಕರ ಥ್ರೋಬಾಲ್‌ನಲ್ಲಿ ಪ್ರಥಮ, ಹಾಕಿ ಹಾಗೂ ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಬಾಲಕಿಯರ ಹಾಕಿ ತಂಡ ಪ್ರಥಮ ಸ್ಥಾನ ಪಡೆದರೆ, ಹ್ಯಾಂಡ್‌ಬಾಲ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದೆ. ಖೋ–ಖೋ ಹಾಗೂ ಕಬಡ್ಡಿ ಕ್ರೀಡೆಗಳಲ್ಲಿಯೂ ಕಾಲೇಜಿನ ಹಲವು ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಡಾ. ಸಂಜಯ್ ಎಸ್. ಸಾವುಕಾರ, ಕಾರ್ಯಾಧ್ಯಕ್ಷೆ ಸೀತಾ ಕೋಟಿ, ತರಬೇತುದಾರರು ಹಾಗೂ ದೈಹಿಕ ಶಿಕ್ಷಣ ಉಪನ್ಯಾಸಕ ಹನುಮಂತ ಮಾಸ್ತಿ, ಪ್ರಾಚಾರ್ಯೆ ಸುಮಾ ವಿ. ಹೊಸಮನಿ, ಹಿರಿಯ ಉಪನ್ಯಾಸಕ ಶಂಭು ಕಡೂರ ಸೇರಿದಂತೆ ಕಾಲೇಜಿನ ಎಲ್ಲ ಉಪನ್ಯಾಸಕರು ಹಾಗೂ ಸಿಬ್ಬಂದಿ ಅಭಿನಂದಿಸಿ ಶುಭ ಹಾರೈಸಿದ್ದಾರೆ.

---

## ರೈತರ ಸಂಕಷ್ಟಕ್ಕೆ ಸರ್ಕಾರ ತಕ್ಷಣ ಸ್ಪಂದಿಸಲಿ: ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ಆಗ್ರಹ

# 2,500 ಬರ ಪರಿಹಾರ ಸಾಲದು: ಎಕರೆಗೆ 50 ಸಾವಿರ ನೀಡಿ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ರೈತರಿಗೆ ನೀಡಲಾಗುತ್ತಿರುವ ಬರ ಪರಿಹಾರದ ಮೊತ್ತವನ್ನು ಹೆಚ್ಚಿಸಿ, ಪ್ರತಿ ಎಕರೆಗೆ ಕನಿಷ್ಠ 50 ಸಾವಿರ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಜಾಧವ ಅವರ ನೇತೃತ್ವದಲ್ಲಿ ರಾಣೇಬೆನ್ನೂರು ತಹಶೀಲ್ದಾರರ ಮೂಲಕ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ತಾಲೂಕು ಅಧ್ಯಕ್ಷ ಚಂದ್ರಪ್ಪ ಬಣಕಾರ, ಸರ್ಕಾರವು ರೈತರ ಖಾತೆಗೆ 2,500 ಬರ ಪರಿಹಾರ ನೀಡುವುದಾಗಿ ಘೋಷಿಸಿದೆ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಮೊತ್ತ ರೈತರ ಸಂಕಷ್ಟಕ್ಕೆ ಯಾವುದೇ ರೀತಿಯಲ್ಲೂ ಸಾಕಾಗುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರು ಬಿತ್ತನೆ ಬೀಜ, ಗೊಬ್ಬರ, ಉಳುಮೆ ಸೇರಿದಂತೆ ಪ್ರತಿ ಎಕರೆಗೆ ಸುಮಾರು 40 ಸಾವಿರದಿಂದ 50 ಸಾವಿರದವರೆಗೆ ಖರ್ಚು ಮಾಡುತ್ತಾರೆ. ಆದರೆ ಮಳೆಯ ಕೊರತೆಯಿಂದಾಗಿ ಬೆಳೆಗಳು ಒಣಗಿ ಹೋಗಿದ್ದು, ಕೆಲವೆಡೆ ಅರ್ಧಕ್ಕೆ ಒಣಗಿ ರೈತರ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ. ಒಂದು ಎಕರೆಗೆ 4ರಿಂದ 5 ಕ್ವಿಂಟಾಲ್ ಜೋಳವೂ ದೊರೆಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ರೈತ ದೇಶಕ್ಕೆ ಅನ್ನ ನೀಡುವವನು. ರೈತರನ್ನು ಕೇವಲ 'ದೇಶದ ಬೆನ್ನೆಲುಬು' ಎಂದು ಕರೆಯುವುದಷ್ಟೇ ಅಲ್ಲದೆ, ಅವರ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರ ನೈಜವಾಗಿ ಬೆಂಬಲಕ್ಕೆ ನಿಲ್ಲಬೇಕು. ರೈತರ ಬದುಕು ಉಳಿಸುವ ನಿಟ್ಟಿನಲ್ಲಿ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.



ಈ ಹೋರಾಟ ಸಾಂಕೇತಿಕವಾಗಿದ್ದು, ಸರ್ಕಾರ ಕೂಡಲೇ ರೈತರ ಬೇಡಿಕೆಗೆ ಸ್ಪಂದಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಜಾಧವ, ಚಂದ್ರಪ್ಪ ಬಣಕಾರ, ಸಿದ್ದರೋಡ ಗುರುಂ, ಶ್ರೀಧರ ಛಲವಾದಿ, ಪರಶುರಾಮ ಕುರುವತ್ತಿ, ಆನಂದ ಲಮಾಣಿ, ಕೃಷ್ಣ ವೇಷಗಾರ, ಶ್ರೀಕಾಂತ ಕಡ್ಲಿಗೊಂದಿ, ಮಂಜಪ್ಪ ಆನ್ವೇರಿ ಸೇರಿದಂತೆ ರೈತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

---

# ಅ.2 ರಂದು ವಧಾಲಯ ಮತ್ತು ಮಾಂಸದ ಅಂಗಡಿಗಳು ಬಂದ್

**ಹುಬ್ಬಳ್ಳಿ:** ಅಕ್ಟೋಬರ್ 2 ರಂದು ಮಹಾತ್ಮಾ ಗಾಂಧೀಜಿ ಜಯಂತಿ ಇರುವುದರಿಂದ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಹುಬ್ಬಳ್ಳಿ ಹಾಗೂ ಧಾರವಾಡ ವಧಾಲಯಗಳು ಹಾಗೂ ಎಲ್ಲ ಮಾಂಸ ಮಾರಾಟ ಮಾಡುವ ವ್ಯಾಪಾರಸ್ಥರು ತಮ್ಮ ಮಾಂಸದ ಅಂಗಡಿಗಳನ್ನು ಬಂದು ಮಾಡಲು ಸೂಚಿಸಲಾಗಿದೆ. ಒಂದು ವೇಳೆ ಯಾರಾದರೂ ಮಾಂಸದ ಅಂಗಡಿಗಳನ್ನು ತೆಗೆದಲ್ಲಿ ಪಾಲಿಕೆಯಿಂದ ಅವರ ಲೈಸನ್ಸನ್ನು ರದ್ದುಪಡಿಸಿ ಸರ್ಕಾರದ ನಿಯಮಗಳನ್ವಯ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮುಖ್ಯ ಪಶು ವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಟಗಿ ಕೆಪಿಎಸ್ ಶಾಲಾ ಮಕ್ಕಳ ಕ್ರೀಡಾ ಸಾಧನೆ

## ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ 7 ವಿದ್ಯಾರ್ಥಿಗಳು ಆಯ್ಕೆ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**
ತಾಲೂಕು ಮಟ್ಟದಲ್ಲಿ ನಡೆದ ಮಕ್ಕಳ ಕ್ರೀಡಾಕೂಟದಲ್ಲಿ ಇಟಗಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿ ಶಾಲೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.

ಇತ್ತೀಚೆಗೆ ನಡೆದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಶಾಲೆಯ ವಿದ್ಯಾರ್ಥಿನಿ ದೀಕ್ಷಾ ರಾಮಲಿಂಗಣ್ಣನವರ್ ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಹಾಲಮ್ಮ ತಿಪ್ಪಜೇರ್ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದರೆ, ರಾಜಭಕ್ಷ ದೊಡ್ಡಮನಿ ಚಕ್ರ ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಇದೇ ವೇಳೆ ಬಾಲಕಿಯರ ವಿಭಾಗದ ಕೋಕೋ ಗುಂಪು ಆಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದು, ತಂಡದ ನಾಲ್ವರು ವಿದ್ಯಾರ್ಥಿನಿಯರಾದ ದೀಕ್ಷಾ ಭಿದರಿ, ಕಾವೇರಿ ಪೂಜಾರ್, ಸಾದಿಯ ಕೆಂಗೊಂಡ ಹಾಗೂ ಶರಣ್ಯ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವೈಯಕ್ತಿಕ ಹಾಗೂ ಗುಂಪು ವಿಭಾಗಗಳಲ್ಲಿ ಒಟ್ಟು ಏಳು ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವುದು ಶಾಲೆಯ ಕ್ರೀಡಾ ಪ್ರತಿಭೆಗೆ ಸಾಕ್ಷಿಯಾಗಿದೆ. ಉತ್ತಮ ತರಬೇತಿ ಹಾಗೂ ಮಾರ್ಗದರ್ಶನದಿಂದ ಈ ಮಕ್ಕಳು ಜಿಲ್ಲಾ ಮಟ್ಟದಲ್ಲೂ ಉತ್ತಮ ಪ್ರದರ್ಶನ ನೀಡಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಗ್ರಾಮಸ್ಥರು ಅಭಿಪ್ರಾಯಪಟ್ಟಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಶಿಕ್ಷಕರು, ಪೋಷಕರು ಹಾಗೂ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿ, ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಯಶಸ್ಸು ಸಾಧಿಸಲಿ ಎಂದು ಶುಭ ಹಾರೈಸಿದ್ದಾರೆ.



# ದಾರಿ ತಪ್ಪಿಸುವ ಕೆಲಸ ಮಾಡುತ್ತಿವೆ ಮೊಬೈಲ್‌ಗಳು

**ಹಾವೇರಿ:** ಮುಷ್ಠಿಯಲ್ಲಿ ಇರುವ ಮೊಬೈಲ್ ಜೀವನ ಪಾಠವನ್ನು ಕಲಿಸುವುದಕ್ಕಿಂತ ದಾರಿ ತಪ್ಪಿಸುವ ಕೆಲಸ ಮಾಡುತ್ತಿವೆ.ಪುಸ್ತಕದ ಓದು ಕ್ಷಿಣಿಸುತ್ತಿರುವ ಸಂದಿಗ್ಧ ಸ್ಥಿತಿಯಲ್ಲಿ ಗ್ರಂಥಾಲಯಗಳ ಅವಶ್ಯಕತೆ ಇದೆ ಎಂದು ಮುನ್ಸಿಪಲ್ ಹೈಸ್ಕೂಲಿನ ಪ್ರಧಾನ ಗುರುಮಾತೆ ಶ್ರೀಮತಿ ಶೋಭಾ ಜಾಗಟಗೇರಿ ಹೇಳಿದರು.

ಇಲ್ಲಿಯ ಶಿವಯೋಗೀಶ್ವರ ನಗರದಲ್ಲಿರುವ ಲೇಖಕ ಶಿಕ್ಷಕ ಜಿ.ಎಂ. ಓಂಕಾರಣ್ಣನವರ ಮನೆಯಲ್ಲಿ ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತಿ ಸಮಿತಿಯ ಪುಸ್ತಕ ಪ್ರಾಧಿಕಾರದ 53ನೇ ಗ್ರಂಥಾಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಐದು ಸಾವಿರ ಪುಸ್ತಕಗಳು ಒಂದು ಕಾಲದಲ್ಲಿ ಮುನ್ಸಿಪಲ್ ಹೈಸ್ಕೂಲಿನಲ್ಲಿ ಓದಲು ಸಿಗುತ್ತಿದ್ದವು. ಅದಕ್ಕಾಗಿ ಸಾರ್ವಜನಿಕ ಸದಸ್ಯತ್ವವನ್ನೂ ಮಾಡಿದ ಕೀರ್ತಿ ಹೈಸ್ಕೂಲಿಗಿದೆ. ಈ ಪರಂಪರೆಯನ್ನು ಮತ್ತೆ ಕಟ್ಟಬೇಕಾಗಿದೆ ಎಂದರು.

ಅಧ್ಯಕ್ಷತೆಯನ್ನುವಹಿಸಿದ್ದ ಕರುನಾಡ ಕನ್ನಡ ಸಾಂಸ್ಕೃತಿಕ ವೇದಿಕೆಯ ರಾಜ್ಯಾಧ್ಯಕ್ಷರಾದ ಎಸ್.ಬಿ.ಮುಡೆಣ್ಣವರ ಮಾತನಾಡಿ ಪುಸ್ತಕ ಮರೆಯಾದರೆ ಜ್ಞಾನವೂ ಮರೆಯಾದಂತೆ, ಪುಸ್ತಕಗಳೆಂದರೆ,ಕಾಗದದ ಮುದ್ದೆಗಳಲ್ಲ, ಓದುಗರನ್ನು ಸೃಷ್ಟಿ ಮಾಡುವು ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮನೆಗೊಂದು ಗ್ರಂಥಾಲಯ ಯೋಜನೆ ಈ ದಿಕ್ಕಿನಲ್ಲಿ ಶ್ರಮಿಸುವಂತಾಗಲಿ ಎಂದರು.

ಈ ಸಂದರ್ಭದಲ್ಲಿ ಓಂಕಾರಣ್ಣನವರ ಅಳಿಯ ದಯಾನಂದ ಮಲಗುಂದ ಮತ್ತು ಶ್ರೀಮತಿ ನೇಹಾ ಅವರುಗಳನ್ನು ಜಾಗೃತಿ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವಿರೂಪಾಕ್ಷ ಹಾವನೂರ,ಎಂ.ಜಿ.ಓಲೇಕಾರ,ಅಶೋಕ ಉಪಲಿ,ಉಡಚಪ್ಪ ಮಾಳಗಿ,ಶ್ರೀಮತಿ ಎಸ್.ಬಿ. ಬಾರ್ಕಿ,ಅನಿತಾ ಹರನಗಿರಿ,ರೇಣುಕಾ ಗುಡಿಮನಿ ಮುಂತಾದವರು ಉಪಸ್ಥಿತರಿದ್ದರು.ಜಿಲ್ಲಾ ಸಂಚಾಲಕ ಎಸ್. ಆರ್. ಹಿರೇಮಠ ಪ್ರಾಸ್ತಾವಿಕ ಮಾತನಾಡಿದರು. ಕುಮಾರ ಅಭಿನವ ಭಟ್ಟ ಪ್ರಾರ್ಥಿಸಿದರು. ಶಿಕ್ಷಕಿ ರಂಜನಾ ಭಟ್ಟ ಕಾರ್ಯಕ್ರಮ ನಿರೂಪಿಸಿದರು.ಜಿ.ಎಂ. ಓಂಕಾರಣ್ಣನವರ ಎಲ್ಲರನ್ನು ವಂದಿಸಿದರು.




# ವೈದ್ಯಕೀಯ ಕ್ಷೇತ್ರದಲ್ಲಿ ಫಾರ್ಮಸಿ ಅಧಿಕಾರಿಗಳ ಪಾತ್ರ ಮಹತ್ವದ್ದು: ಡಾ. ಸರಿತಾ

**ಸಮಾಲೋಚನೆ ಸುದ್ದಿ ಹಾವೇರಿ**
ವೈದ್ಯಕೀಯ ಕ್ಷೇತ್ರದಲ್ಲಿ ಫಾರ್ಮಸಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದ್ದು, ವೈದ್ಯರು ಹಾಗೂ ಫಾರ್ಮಸಿ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿದಾಗ ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ನೀಡಲು ಸಾಧ್ಯ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಸರಿತಾ ಹೇಳಿದರು.

ರಾಜ್ಯ ಸರಕಾರಿ ಫಾರ್ಮಸಿ ಅಧಿಕಾರಿಗಳ ಸಂಘ ಜಿಲ್ಲಾ ಘಟಕದಿಂದ ಬುಧವಾರ ತಾಲ್ಲೂಕಿನ ದೇವಗಿರಿ ಬಳಿಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವೈಜ್ಞಾನಿಕ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೆಲಸದ ಒತ್ತಡದ ನಡುವೆ ಆರೋಗ್ಯಯುತ ಸಮಾಜ ನಿರ್ಮಾಣ ಮಾಡುವಲ್ಲಿ ಫಾರ್ಮಸಿ ಅಧಿಕಾರಿಗಳ ಪಾತ್ರ ಬಹಳ ದೊಡ್ಡದು. ತಾಳ್ಮೆ ಹಾಗೂ ಜನರ ನಡುವಿನ ಉತ್ತಮ ಸಂವಹನ ವೃತ್ತಿ ಬದುಕು ಸರಾಗವಾಗಿ ಸಾಗಿಸಲು ಸಹಕಾರಿಯಾಗಿದೆ ಎಂದರು.

ರಾಜ್ಯ ಸಂಘದ ಗೌರವಾಧ್ಯಕ್ಷ ಸುರೇಶ ಮೊರಗೇರಿ ಮಾತನಾಡಿ, ಪ್ರಾಮಾಣಿಕ ಪ್ರಯತ್ನದ ಮೂಲಕ ಸಂಘಟನೆಯ ಹೋರಾಟದಿಂದ ಸೂಕ್ತ ಸ್ಥಾನಮಾನ ಪಡೆಯಬಹುದಾಗಿದೆ. ಇದನ್ನು ಪ್ರತಿಯೊಬ್ಬರೂ ಅರಿತುಕೊಳ್ಳುವುದು ಅತ್ಯವಶ್ಯ. ಒಗ್ಗಟ್ಟಿನಿಂದ ಇದ್ದರೆ ಏನಾದರೂ ಕೂಡ ಪಡೆಯಬಹುದಾಗಿದೆ. ಆದರೆ ಹೊಂದಾಣಿಕೆಯಲ್ಲಿ ಕೊರತೆ ಇಲ್ಲದಿದ್ದರೆ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದನ್ನು ಪ್ರತಿಯೊಬ್ಬ ಫಾರ್ಮಸಿ ಅಧಿಕಾರಿಗಳು ಅರಿತುಕೊಳ್ಳಬೇಕಿದೆ ಎಂದರು.




ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಪಿ.ಆರ್. ಹಾವನೂರ ಮಾತನಾಡಿ, ಮಾಡುವ ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆ ಹಾಗೂ ಏಕತಾ ಮನೋಭಾವ ಇದ್ದಲ್ಲಿ ವೃತ್ತಿ ಬದುಕಿನಲ್ಲಿ ನೆಮ್ಮದಿ ಇರಲಿದೆ. ಜೊತೆಗೆ ವೃತ್ತಿ ಬದುಕಿನಲ್ಲಿ ಉನ್ನತ ಮಟ್ಟಕ್ಕೆ ಏರಲು ಸಹಕಾರಿಯಾಗಲಿದೆ. ಬಡವರ ಸೇವೆ ಮಾಡುವ ಅವಕಾಶವನ್ನು ಸರಕಾರ ನಮಗೆ ಒದಗಿಸಿ ಕೊಟ್ಟಿದೆ. ಧ್ವನಿ ಇಲ್ಲದವರಿಗೆ ಧ್ವನಿಯಾಗುವ ಮೂಲಕ ನಾವೆಲ್ಲರೂ ಪ್ರಾಮಾಣಿಕವಾಗಿ ಜನಸೇವೆ ಮಾಡೋಣ ಎಂದರು.

ಜಿಲ್ಲಾ ಘಟಕದ ಅಧ್ಯಕ್ಷ ಪಟೇಲ ಮಹಮ್ಮದ್ ಅಸಗರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಾಗಾರವನ್ನು ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ನೀಲೇಶ ಎಂ.ಎನ್ ಉದ್ಘಾಟಿಸಿದರು. ಎಮ್.ಎಮ್.ಜೆ.ಜಿ ಫಾರ್ಮಸಿ ಕಾಲೇಜಿನ ಪ್ರಾಚಾರ್ಯೆ ಡಾ. ಶಾಯಿಸ್ತಾ ಓಮರ್, ರಾಜ್ಯ ಸರಕಾರಿ ಫಾರ್ಮಾಸಿ ಅಧಿಕಾರಿಗಳ ಸಂಘದ ಅಧ್ಯಕ್ಷ ಸಂತೋಷಕುಮಾರ ಕುಸುಮಾ ಮಾತನಾಡಿದರು. 'ವೃತ್ತಿ ಕೌಶಲ ಹಾಗೂ ಒತ್ತಡ ನಿರ್ವಹಣೆ' ಕುರಿತು ನಿವೃತ್ತ ಫಾರ್ಮಾಸಿ ಅಧಿಕಾರಿ ಶಿವಯೋಗಿ ಬಣಕಾರ ಉಪನ್ಯಾಸ ನೀಡಿದರು. ಸಂಘದ ರಾಜ್ಯ ಪರಿಷತ್ ಸದಸ್ಯ ಶಶಿಧರಸ್ವಾಮಿ ನಿರ್ವಾಣಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ವೇಳೆ ಉತ್ತಮ ಫಾರ್ಮಸಿ ಅಧಿಕಾರಿಗಳನ್ನು, ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಫಾರ್ಮಸಿ ಅಧಿಕಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಜಿಲ್ಲಾ ಕುಟುಂಬ ಕಲ್ಯಾಣಾಕಾರಿ ಡಾ.ರುದ್ರಸ್ವಾಮಿ ಎಂ.ಕೆ., ಜಿಲ್ಲಾ ಕುಷ್ಠರೋಗ ನಿರ್ಮೂಲನಾಣಾಧಿಕಾರಿ ಡಾ. ಚನ್ನಬಸಯ್ಯ ವಿರಕ್ತಮಠ, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಮೋದ ಗೊಂದಕರ, ರಾಜ್ಯ ಸಂಘದ ಕಾರ್ಯದರ್ಶಿ ವಿಜಯಕುಮಾರ್ ವ್ಹಿ.ಎನ್., ರಾಜ್ಯ ಸಂಘದ ಖಜಾಂಚಿ ಹಾರೂನ್ ರಷೀದ, ರಾಜ್ಯ ಸಂಘಟನಾ ಕಾರ್ಯದರ್ಶಿ ರಾಮಕೃಷ್ಣ ಘಾಟಗೆ, ಎ.ಆಯ್.ಪಿ.ಎ ರಾಜ್ಯ ಸಂಘಟನಾ ಕಾರ್ಯದರ್ಶಿ ಮಂಜುನಾಥ ಕೆರೂಡಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿಜಯಲಕ್ಷ್ಮಿ ಹಿರೇಮಠ ನಿರ್ವಹಿಸಿದರು.

# ಶಿವರಾಮ ತಳವಾರ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಅಚಿವರ್ ಗೌರವಕ್ಕೆ ಪಾತ್ರ

**ಹಾವೇರಿ:** ಹಾವೇರಿಯ ಪುಟ್ಟ ಬಾಲಕ ಶಿವರಾಮ ಪರಶುರಾಮ ತಳವಾರ ತನ್ನ ಅದ್ಭುತ ಪ್ರತಿಭೆಯಿಂದ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಅಚಿವರ್ ಗೌರವಕ್ಕೆ ಪಾತ್ರರಾಗಿದ್ದಾನೆ.

2023ರ ನವೆಂಬರ 22 ಜನಿಸಿದ ಶಿವರಾಂ ಕೇವಲ 2 ವರ್ಷ 8 ತಿಂಗಳಿನ ವಯಸ್ಸಿನಲ್ಲಿ 15 ವಾಹನಗಳು, 10 ಬಣ್ಣಗಳು, 7 ಕವಿಗಳು, 7 ಹಣ್ಣುಗಳ ಮತ್ತು ಪಕ್ಷಿಗಳನ್ನು ಗುರುತಿಸಿ ಹೆಸರಿಸುತ್ತಾನೆ. ಒಂದು ಇಂಗ್ಲೀಷ್ ನರ್ಸರಿ ಹಾಡು ಒಂದು ವರ್ಷದ ತಿಂಗಳುಗಳು ಮತ್ತು ಸಂಬಂಧಿತ ಪದಗಳೊಂದಿಗೆ ಇಂಗ್ಲೀಷ್ ವರ್ಣಮಾಲೆಯ 26 ಅಕ್ಷರಗಳನ್ನು ಪಠಿಸುತ್ತಾನೆ ಮತ್ತು 5 ಕೆಜಿ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಒಂದರಿಂದ ಹತ್ತರವರೆಗೆ ಸಂಖ್ಯೆಗಳನ್ನು ಎಣಿಸುತ್ತಾನೆ 8 ನಾಯಕರು, 10 ದೇಹದ ಭಾಗಗಳನ್ನು ಗುರುತಿಸುತ್ತಾನೆ 110=10 ರ ವರೆಗೆ ಹೇಳುತ್ತಾನೆ ಅ=ಅಮ್ಮ ರಿಂದ ಹ ಅಃ ಅಂ=ಅಂಗಡಿಯವರಿಗೆ ಓದುತ್ತಾನೆ.

ಹಾವೇರಿ ನಗರ ನಿವಾಸಿಗಳಾದ ಪರಶುರಾಮ ಹಾಗೂ ಕವಿತಾ ದಂಪತಿಯ ಪುತ್ರ ಶಿವರಾಮ ನ ಅಪರೂಪ ಪ್ರತಿಭೆ ಹಾಗೂ ಸಾಧನೆಗೆ ಕುಟುಂಬಸ್ಥರು ಬಂಧುಗಳು ಹಾಗೂ ಹಿತೈಷಿಗಳು ಅಭಿನಂದನೆ ಸಲ್ಲಿಸಿದ್ದಾರೆ. ಈ ಪುಟ್ಟ ಬಾಲಕನ ಸಾಧನೆ ಕಂಡು ಶ್ರೀ ಮಹರ್ಷಿ ವಾಲ್ಮೀಕಿ ಹೊರಗುತ್ತಿಗೆ ನೌಕರರ ಸಂಘ ವತಿಯಿಂದ ಸನ್ಮಾನಿಸಲಾಯಿತು ಅಧ್ಯಕ್ಷರಾದ ಚಂದ್ರಪ್ಪ ಕರಿಬಸಪ್ಪನವರ, ಶಿವನಗೌಡರು ಪಾಟೀಲ್, ಉದಯಕುಮಾರ ಅಗಸನಮಟ್ಟಿ, ಚಂದ್ರಶೇಖರ ಕದರಮಂಡಲಗಿ, ಶಿವರಾಜ ಓಲೇಕಾರ, ರವಿ ಮನ್ನಂಗಿ, ಮಂಜುನಾಥ ಬಿಳಿಚೋಡ, ಚರಣಕುಮಾರ್ ಪೂಜಾರ ಇತರರು ಉಪಸ್ಥಿತರಿದ್ದರು.



# ಗಣೇಶ ಮೂರ್ತಿಗೆ ತಾಲೂಕು ಕಾರ್ಯನಿರತ ಪತ್ರಕರ್ತರು ಬುಧವಾರ ವಿಶೇಷ ಪೂಜೆ

**ಹರಿಹರ:** ನಗರದ ಪೇಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಿಂದೂ ಜಾಗರಣಾ ವೇದಿಕೆ ಹಾಗೂ ಹಿಂದೂ ಮಹಾ ಗಣಪತಿ ಉತ್ಸವ ಸಮಿತಿಯಿಂದ ಪ್ರತಿಷ್ಠಾಪಿಸಲಾಗಿರುವ ಗಣೇಶ ಮೂರ್ತಿಗೆ ತಾಲೂಕು ಕಾರ್ಯನಿರತ ಪತ್ರಕರ್ತರು ಬುಧವಾರ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಹಿಂದೂ ಮಹಾ ಗಣಪತಿ ಉತ್ಸವ ಸಮಿತಿಯ ವತಿಯಿಂದ ತಾಲೂಕು ಕಾರ್ಯನಿರತ ಪತ್ರಕರ್ತರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ 2026ನೇ ಸಾಲಿನ ಉತ್ಸವ ಸಮಿತಿ ಅಧ್ಯಕ್ಷ ಸುರೇಶ್ ಪೈ ಚಂದಾಪುರ, ಗೌರವ ಸಲಹೆಗಾರ ಶೇಖರಗೌಡ್ರ ಪಾಟೀಲ, ಪ್ರಚಾರ ಸಮಿತಿ ಅಧ್ಯಕ್ಷ ಸಂತೋಷ ಗುಡಿಮನಿ, ಪೂಜಾ ಸಮಿತಿ ಅಧ್ಯಕ್ಷ ನಾಗರಾಜ ಬಂಡಾರಿ, ಪ್ರಸಾದ ಸಮಿತಿ ಅಧ್ಯಕ್ಷ ರಾಜು ರೋಖಡೆ, ಅಲಂಕಾರ ಸಮಿತಿ ಅಧ್ಯಕ್ಷ ಎಬಿಎಂ ವಿಜಯಕುಮಾರ್, ಮಹಿಳಾ ಸಮಿತಿ ಅಧ್ಯಕ್ಷೆ ರಶ್ಮಿ ಮೆರವಾಡೆ, ಸ್ವಾತಿ ಹನುಮಂತಪ್ಪ, ನಿತ್ಯಾನಂದ, ರಟ್ಟಿಹಳ್ಳಿ ಮಂಜುನಾಥ, ಶಿವು ಮೊಬೈಲ್, ಅದ್ವೈತ್ ಶಾಸ್ತ್ರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.




# ಜಾನುವಾರು ಆಧಾರಿತ ಕೃಷಿಯಿಂದ ಉತ್ತಮ ಆದಾಯ ಸಾಧ್ಯ: ಡಾ. ಜಯದೇವಪ್ಪ

**ಹರಿಹರ:** ನಾಗರಿಕತೆ ಎಷ್ಟೇ ಆಧುನೀಕರಣಗೊಂಡರೂ, ಸಮೃದ್ಧ ಸಂಪನ್ಮೂಲಗಳಿದ್ದರೂ ಇಂದಿಗೂ ನಾವು ಅವೈಜ್ಞಾನಿಕ ಕೃಷಿ ಪದ್ಧತಿಯಲ್ಲೇ ಮುಂದುವರಿದಿದ್ದೇವೆ. ಮಣ್ಣು ಪರೀಕ್ಷೆ ಮಾಡಿಸಿ ಕೃಷಿ ಮಾಡುವ ಪದ್ಧತಿ ಬಹುತೇಕ ರೈತರಲ್ಲಿ ಕಂಡುಬರುತ್ತಿಲ್ಲ. ಆದರೆ ಜಾನುವಾರುಗಳನ್ನು ಆಧಾರವಾಗಿಟ್ಟುಕೊಂಡು ಕೃಷಿ ಕೈಗೊಂಡಿರುವ ರೈತರು ಇಂದಿನ ದಿನಗಳಲ್ಲಿ ಉತ್ತಮ ಕೃಷಿಕರಾಗಿದ್ದಾರೆ ಎಂದು ದಾವಣಗೆರೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಪಶುಪಾಲನೆ ವಿಜ್ಞಾನ ವಿಷಯ ತಜ್ಞ ಹಾಗೂ ಸಂಪನ್ಮೂಲ ವ್ಯಕ್ತಿ ಡಾ. ಬಿ.ಕೆ. ಜಯದೇವಪ್ಪ ಹೇಳಿದರು.

ತಾಲೂಕಿನ ಮಲೇಬೆನ್ನೂರಿನಲ್ಲಿ ವಂದೇಮಾತರಂ ಸೌಹಾರ್ದ ಸಹಕಾರಿ ಸಂಘದ ವತಿಯಿಂದ ಶ್ರೀ ವಿಶ್ವಕರ್ಮ ಸಮುದಾಯ ಭವನದಲ್ಲಿ ಇತ್ತೀಚೆಗೆ ಆಯೋಜಿಸಿದ್ದ 3ನೇ ವರ್ಷದ ಸಾಮಾನ್ಯ ವಾರ್ಷಿಕ ಮಹಾಸಭೆಯಲ್ಲಿ 'ಪಶುಸಂಗೋಪನೆ' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ವಿವಿಧ ಕಾರಣಗಳಿಂದ ಸಂಕಷ್ಟಕ್ಕೆ ಸಿಲುಕಿದ್ದ ಕೃಷಿಕರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದ್ದು, ಪ್ರಸ್ತುತ ಶೇ.52ರಷ್ಟು ಕೃಷಿ ಹಾಗೂ ಹೈನುಗಾರಿಕೆ ಮಾತ್ರ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಪಂಚಸೂತ್ರಗಳನ್ನು ಅಳವಡಿಸಿಕೊಳ್ಳಬೇಕು. ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಲು ಅಗತ್ಯವಾದ ಹಲವು ಉಪಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಕರೆ ನೀಡಿದರು.

ರಾಷ್ಟ್ರೀಯ ಜಾನುವಾರು ಮಿಷನ್ ಹಾಗೂ ಅಕ್ಷಯಕಲ್ಪ ಕೃಷಿ ಮಾದರಿಯಡಿ ಸರ್ಕಾರದಿಂದ ಕೃಷಿಕರಿಗೆ ಹಲವು ಸೌಲಭ್ಯಗಳು ದೊರೆಯುತ್ತಿದ್ದು, ರೈತರು ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.




ಸಂಘದ 2026–27ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯಲ್ಲಿ ಓದಿ ಅಂಗೀಕರಿಸುವಂತೆ ಕೋರಿದ ಸಂಸ್ಥಾಪಕ ಅಧ್ಯಕ್ಷ ಎಸ್.ಎಂ. ಉಮೇಶ್, ಸಂಘವು ಮೂರನೇ ಆರ್ಥಿಕ ವರ್ಷದಲ್ಲಿ ₹1 ಕೋಟಿ 26 ಲಕ್ಷದ 32 ಸಾವಿರ ಠೇವಣಿ ಹೊಂದಿದೆ ಎಂದು ತಿಳಿಸಿದರು. ಸಂಘದ ಸದಸ್ಯರಿಗೆ ವಿವಿಧ ರೀತಿಯಲ್ಲಿ ಸಾಲ ಸೌಲಭ್ಯ ಒದಗಿಸಲಾಗಿದ್ದು, 31.03.2026ರ ವೇಳೆಗೆ ₹1 ಕೋಟಿ 99 ಲಕ್ಷದ 48 ಸಾವಿರ ಸಾಲ ವಿತರಿಸಲಾಗಿದೆ. ಸಂಸ್ಥೆ ನಿರೀ–ಕ್ಷೆಯಂತೆ ಅಲ್ಪ ಲಾಭದತ್ತ ಮುನ್ನಡೆಯುತ್ತಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಬಿ. ಕೊಟ್ರಪ್ಪರೆಡ್ಡಿ ಮಾತನಾಡಿ, ಈಗಾಗಲೇ ತಾಲೂಕಿನಲ್ಲಿ 33 ಗ್ರಾಮಗಳಿಗೆ ಸಂಸ್ಥೆಯ ಸೇವೆಯನ್ನು ವಿಸ್ತರಿಸಲಾಗಿದೆ. ಸದಸ್ಯರು ಹಾಗೂ ಸಾರ್ವಜನಿಕರ ಸಹಕಾರದಿಂದ ಇನ್ನಷ್ಟು ಉನ್ನತ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವ ನಿಟ್ಟಿನಲ್ಲಿ ಸಂಸ್ಥೆ ಮುನ್ನಡೆಯಲಿದೆ ಎಂದರು.

ಸಂಘದ ಉಪಾಧ್ಯಕ್ಷ ಜಿಗಳಿ ಶಂಕರಾಚಾರ್, ನಿರ್ದೇಶಕ ಇಟಗಿ ಶಿವಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಸ್ಥೆಯ ನಿರ್ದೇಶಕ ಚಂದ್ರಶೇಖರ್ ಬಿ.ಜಿ. ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಶ್ವೇತಾ ಎಂ.ಎಸ್. ಕಾರ್ಯಕ್ರಮ ನಿರ್ವಹಿಸಿದರು. ಸಂಸ್ಥೆಯ ನಿರ್ದೇಶಕರಾದ ಶಿವಕುಮಾರ್ ಮುದೇನೂರು, ಈಶ್ವರ್, ಮಂಜುನಾಥ್ ಬಿ., ಸಿದ್ಧನಗೌಡ ಎಂ.ಬಿ., ಶಿವಪ್ಪ ಕತ್ತಲಗೆರೆ ಎಸ್.ಸಿ., ಮಂಜುನಾಥ್, ಸಿಬ್ಬಂದಿ ಬಸವರಾಜ್, ಪ್ರಸಾದ್ ಸೇರಿದಂತೆ ವಿವಿಧ ಗ್ರಾಮಗಳ ಪಿಗ್ಮಿ ಏಜೆಂಟರು, ಗಣ್ಯರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning




**"ಗಾಂಧಿ ನೀ ಸತ್ಯದ ತೇರು**
**ಪ್ರಾಮಾಣಿಕತೆಗೆ ಇಲ್ಲ ಸಮನಾರು**
**ಸತ್ಯಾಸತ್ಯತೆಗಳ ಸತತ ಶೋಧಕ**
**ತ್ಯಾಗ ಅಹಿಂಸೆಗಳ ಧ್ಯೋತಕ"**

ಹೀಗೆ ಗಾಂಧೀಜಿಯವರ ಸತ್ಯ, ಪ್ರಾಮಾಣಿಕತೆ, ದೇಶಭಕ್ತಿ, ಅಹಿಂಸೆ, ಸ್ವದೇಶ ಪ್ರೇಮ, ಸ್ವಾತಂತ್ರ್ಯ ಇವೆಲ್ಲವುಗಳ ಕುರಿತು ಹೇಳುತ್ತಾ ಹೋದರೆ ಒಂದು ಜನ್ಮವೂ ಸಾಕಾಗದು "ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು" ಎಂಬ ಗಾದೆಗೆ ಅವರೇನು ಹೊರತಾಗಿರಲಿಲ್ಲ. ಗಾಂಧೀಜಿ ಬಾಲ್ಯದಲ್ಲಿದ್ದಾಗ ಕಳ್ಳತನವನ್ನೂ ಮಾಡಿದ್ದಾರೆ. ಆದರೆ ಅವರು ನೋಡಿದ ಎರಡು ನಾಟಕಗಳು ಅವರ ಮನಸಿನ ಮೇಲೆ ಅಗಾಧ ಪರಿಣಾಮ ಬೀರಿದವು.

ಎಳೆ ಮನದಲಿರದ ಆಸೆಗಳಿಲ್ಲ
ಭವ್ಯ ಭಾರತದ ನಿರ್ಮಾತೃಕೆಗಳವು..

ವಯೋ ಸಹಜ ತಪ್ಪುಗಳು, ಪ್ರಮಾದಗಳಲ್ಲ ಆದರೆ ಮುಂದುವರೆದರೆ ಅಪರಾಧವಾಗಿ ಪರಿಣಮಿಸಬಹುದು. ಆತ್ಮವಿಮರ್ಶೆಯಂತಹ ಗುರು ಬದುಕಿಗೆ ಮತ್ತೊಂದಿಲ್ಲ.

ಸತ್ಯ ಹರಿಶ್ಚಂದ್ರ ಮತ್ತು ಶ್ರವಣಕುಮಾರನ ಪಿತೃಭಕ್ತಿ ಎಂಬ ಎರಡು ನಾಟಕಗಳು ಅವರ ಬದುಕಿಗೆ ಹಾಕಿಕೊಟ್ಟ ಭದ್ರ ಬುನಾದಿಗಳು ಎಂದರೆ ತಪ್ಪಾಗಲಾರದಾದೀತು. ಬಾಲ್ಯದಲ್ಲಿದ್ದಾಗ ತಾಯಿ ತನ್ನ ಮಗು ನೆರೆಮನೆಯ ಹಣ, ಬೆಲೆ ಬಾಳುವ ವಸ್ತುಗಳನ್ನು ತಂದು ಕೊಡುತ್ತಿರುವಾಗ ತಾಯಿ ಮಗನಿಗೆ ಷಹಬ್ಬಾಷ್ ಎಂದು ಖುಷಿಪಟ್ಟು ಅವನ ಬೆನ್ನು ತಟ್ಟಿದಳು. ಓಹೋ ನನ್ನ ಅಮ್ಮನಿಗೆ ಇದರಿಂದ ಸಂತೋಷ ಸಿಕ್ಕಿದೆ ಎಂದು ತಿಳಿದ ಆ ಮಗು ನಿತ್ಯ ವಸ್ತುಗಳನ್ನು ಕದ್ದು ತರಲಾರಂಭಿಸಿದ. ತಾಯಿ ಪ್ರೋತ್ಸಾಹಿಸುತ್ತಲೆ ಬಂದಳು. ದೊಡ್ಡವನಾದ ನಂತರ ಬ್ಯಾಂಕ್, ದೇವಾಲಯಗಳನ್ನ ಲೂಟಿ ಹೊಡೆಯುತ್ತಾ ಒಂದು ದಿವಸ ಪೋಲಿಸರ ಸೆರೆಯಾಗುತ್ತಾನೆ. ಹಲವಾರು ವಿಚಾರಣೆಗಳ ನಂತರ ಅವನಿಗೆ ಗಲ್ಲು ಶಿಕ್ಷೆಯಾಗುತ್ತದೆ. ಆ ಸಂದರ್ಭದಲ್ಲಿ ಅವನ ಅಂತಿಮ ಇಚ್ಛೆ ಏನು ಎಂದು ಜೈಲರ್ ಕೇಳಿದಾಗ ಆತ ಹೇಳುತ್ತಾನೆ ಮೊದಲು ನನ್ನ ತಾಯಿಗೆ ಗಲ್ಲು ಶಿಕ್ಷೆ ನೀಡಿ ಆನಂತರ ನನ್ನನು ಗಲ್ಲಿಗೇರಿಸಿ ಎನ್ನುತ್ತಾನೆ. ಅವನ ಮಾತಿಗೆ ಜೈಲರ್ ನಿಬ್ಬೆರಗಾಗಿ ಏಕೆಂದು ಕೇಳುತ್ತಾನೆ, ಆಗ ಆತ ಹೇಳುತ್ತಾನೆ ನಾನು ಬಾಲ್ಯದಲ್ಲಿ ಪಕ್ಕದ ಮನೆಯಿಂದ ಕಳ್ಳತನ ಮಾಡಿ ವಸ್ತುಗಳನ್ನು ತಂದು ಕೊಡುತಿದ್ದೆ. ಆಗ ನನ್ನ ಅಮ್ಮ ನನ್ನ ಹುರುದುಂಬಿಸುತ್ತಿದ್ದಳು ಎಂದ. ಈ ಕತೆ ತೀರಾ ಹಳೆಯದು ಆದರೆ ಇದರಿಂದ ದೊರೆಯುವ ನೀತಿ ನವ ನವೀನವೆ. ಅಂದರೆ ಇಲ್ಲಿ ಅವನಿಗೆ ಅಂತಿಮವಾಗಿ ಜ್ಞಾನೋದಯವಾಯಿತು. ಅವನನ್ನ ತಿದ್ದುವಲ್ಲಿ ತಾಯಿ ಎಡವಿದ್ದಳು.


**ಶ್ರೀಮತಿ ಕವಿತಾ ಎಸ್. ವಿ**
**ಮಾರುತಿ ನಗರ,**
**ರಾಣೆಬೆನ್ನೂರು -581115**
**ಜಿಲ್ಲೆ -ಹಾವೇರಿ**

ಇಂದಿನ ಜನ ಸಮೂಹ ಅದೆಷ್ಟೋ ಸಿನಿಮಾಗಳು ಅದೆಷ್ಟೋ ವೆಬ್ ಸಿರೀಸ್ಗಳು ನೋಡಿದರೂ ಕೇಳಿದರೂ ಯಾವ ಸಕಾರಾತ್ಮಕ ಬದಲಾವಣೆಗಳೂ ಕಾಣ ಸಿಗುವುದಿಲ್ಲ. ತಂದೆ ತಾಯಿ ಇಬ್ಬರೂ ಸಂಸ್ಕಾರವಂತರಿದ್ದರೆ ಇಂತಹ ನಿದರ್ಶನಗಳು ಕಮ ವಿರಳ ಆದ- ರೆ ಮಗು ತಪ್ಪು ಮಾಡಿದಾಗ ಅದನ್ನು ತಿದ್ದಿ ಬುದ್ಧಿ ಹೇಳಬೇಕಾದದ್ದು ತಂದೆ ತಾಯಿಯರ ಕರ್ತವ್ಯ. ಅದು ನಯಮಾತುಳಿಂದಾದರೂ ಸರಿ ದಂಡಿಸಿಯಾದರೂ ಸರಿ. ಕೆಲವು ಘಟನೆಗಳಲ್ಲಿ ತಾಯಿ ತಂದೆ ಇಬ್ಬರೂ ಸಂಸ್ಕಾರ ಹೊಂದಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದ್ದರೂ ಮಕ್ಕಳು ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಅದು ಸಹವಾಸ ದೋಷ ಅಥವಾ ಪರಿಸರ ಎನ್ನಬಹುದು. ಒಟ್ಟಾರೆಯಾಗಿ ಒಬ್ಬ ಮನುಷ್ಯ ಪ್ರಾಮಾಣಿಕತೆಯ ಹಾದಿಯಲ್ಲಿ ನಡೆಯಬೇಕಾದರೆ ಬಹಳಷ್ಟು ಮೌಲ್ಯಗಳನ್ನು ಮೈಗೂಡಿಸಿಕೊಂಡಿರಬೇಕು..

ಪ್ರಾಮಾಣಿಕತೆ ದಾರಿಯಲ್ಲಿ ತೃಪ್ತಿ ಅತ್ಯವಶ್ಯ. ಅದನ್ನೇ ಗಾಂಧೀಜಿ ಅನುಸರಿಸಿದ್ದು. ಸತ್ಯ ಮತ್ತು ಅಹಿಂಸೆಯ ಸುಂದರ ಮತ್ತು ಸರಳ ಜೀವನ ಶೈಲಿ. ದೇಶದ ಪ್ರಗತಿಗಾಗಿ ತುಂಡುಡುಗೆಯುಟ್ಟು ಚರಕ ನೇಯುವುದರ ಮುಖಾಂತರ ಉದ್ಯೋಗದ ಮಹತ್ವವನ್ನು ಸಾರಿ ಸ್ವದೇಶಿ ಉತ್ಪನ್ನಗಳ ಬಳಕೆಗೆ ಒತ್ತು ನೀಡಿದರು.

ಇಂದು ವಿದೇಶಿ ವಸ್ತುಗಳ ಬಳಕೆ ಕಣಕಣದಲ್ಲಿ ಏಕೀಕರಣಗೊಂಡಿ- ದೆ. ಎಷ್ಟರ ಮಟ್ಟಿಗೆ ವಿದೇಶಿ ವಸ್ತುಗಳ ಬಳಕೆ ಮಾಡುತ್ತಿದ್ದೇವೆ ಅಂದರೆ ಅವುಗಳಿಲ್ಲದೆ ನಮಗೆ ಬದುಕೆ ಇಲ್ಲ ಎಂಬ ಹಂತ ತಲುಪಿದ್ದೇವೆ. ಚೀನಾದಿಂದ ಬರುವ ಸರಕುಗಳನ್ನು ಸಂಪೂರ್ಣ ನಿಷೇಧಿಸಿದರೂ ಭಾರತದಲ್ಲಿ ಬೀಡು ಬಿಟ್ಟ ವಿದೇಶಿ ಕಂಪನಿಗಳೇನೂ ಕೊರತೆಯಿಲ್ಲ. ವಿದೇಶಿ ವಸ್ತುಗಳು ಭಾರತದಲ್ಲಿ ಬಿಕರಿಯಾಗಿ ವಿದೇಶಿ ರಾಷ್ಟ್ರಗಳು ಶ್ರೀಮಂತ ರಾಷ್ಟ್ರಗಳಾಗಿವೆ. ನಮ್ಮ ದೇಶದ ಪ್ರತಿಭೆಗಳೂ ಸಹ ವಿದೇಶದಲ್ಲಿ ಮಾರಾಟ ಆಗುತ್ತಿವೆ ಅದಕ್ಕೆ ಕಾರಣ ಆರ್ಥಿಕತೆ ಇದ್ದರೂ ಅದಕೆ ಸಂಪೂರ್ಣ ಹೊಣೆ ಸಂಪೂರ್ಣ ಭಾರತೀಯರು.ಹೀಗಿರುವಾಗ ಗಾಂಧೀಜಿ ಯವರ ಸ್ವದೇಶಿ ಕನಸು ಹೇಗೆ ನನಸಾದೀತು?

ಗಾಂಧೀಜಿಯವ ಅವರ ಕನಸುಗಳಲ್ಲಿ ಒಂದನ್ನಾದರೂ ಈಡೇರಿಸಿದ್ದೇವೆಯೆ ಎಂಬ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಗ್ರಾಮ ನ□ರ್ಮಲ್ಯ ಮತ್ತು ರಸ್ತೆ ಸುಧಾರಣೆ, ಪಾನ ಮುಕ್ತ ಭಾರತ, ಸ್ತ್ರೀ ಸ್ವಾತಂತ್ರ್ಯಹೀಗೆಒಂದನ್ನಾದರೂಸಾಕಾರಗೊಳಿಸಿಕೊಂಡಿದ್ದೇವೆಯೆ? ಎಷ್ಟೊ ಗ್ರಾಮಗಳಲ್ಲಿ ಮೂಲ ಸೌಕರ್ಯಗಳೆ ಇಲ್ಲ. ಕುಡಿಯುವ ನೀರಿಗಾಗಿ ಅವರು ಪಡುವ ಯಾತನೆ ಅಷ್ಟಿಷ್ಟಲ್ಲ. ಟ್ಯಾಪ್ ಆನ್ ಮಾಡಿದಾಗ ನೀರಿಲ್ಲದಿದ್ದರೆ ಮನೆಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿ ಮಾಡುವ ನಾವುಗಳೆಲ್ಲ ದೇಶದಲ್ಲಿ ಈ ವಿಷಯಕ್ಕೆ ಒಂದು ದಿನವಾದರೂ ಅಲ್ಲೋಲ ಕಲ್ಲೋಲ ಸೃಷ್ಟಿ ಮಾಡಿದ್ದೀವಾ? ಇಲ್ಲ. ಒಬ್ಬ ಸ್ತ್ರೀ ಮಧ್ಯರಾತ್ರಿ ಹನ್ನೆರಡು ಗಂಟೆಗೆ ಎಲ್ಲಿ ಓಡಾಡುತ್ತಾಳೊ ಅಲ್ಲಿ ನಿಜವಾದ ಸ್ವಾತಂತ್ರ್ಯವಿದೆ ಎಂದು ನುಡಿದಿದ್ದರು ಗಾಂಧೀಜಿ. ಅದಾದರೂ ಈಡೇರಿದೆಯೆ? ಇಲ್ಲ. ಮಧ್ಯರಾತ್ರಿ ಹಾಗಿರಲಿ ಅವಳು ಹಾಡುಹಗಲೇ ಅತ್ಯಾಚಾರಕ್ಕೀಡಾಗುತ್ತಿರುವುದು ನಿಜಕ್ಕೂ ಅವಹೇಳನಕಾರಿ ಸಂಗತಿ. ನಮ್ಮ ಮನೆಯ ಹೆಣ್ಣು ಮಕ್ಕಳ ಬಗೆಗೆ ಕಾಳಜಿ ವಹಿಸುವ ನಾವೆಲ್ಲ ದೇಶದ ಹೆಣ್ಣುಮಕ್ಕಳ ಬಗೆಗೆ ಕಾಳಜಿ ವಹಿಸಿದ್ದೀವಾ? ಇಲ್ಲ. ಸ್ತ್ರೀ ಮತ್ತು ಪುರುಷರ ಮಾನವೆಂದರೆ ಬೇರೆ- ಬೇರೆ ಏನಾದರೂ ಇದೆಯೆ?

ಇನ್ನು 'ಪಾನ ಮುಕ್ತ ಭಾರತ' ಕೇಳಲು ಅದೆಷ್ಟು ಸೊಗಸಾಗಿದೆ. ಆದರೆ ಕುಡಿತದಿಂದಲೆ ಆರ್ಥಿಕ ಸ್ಥಿತಿ ಮೇಲ್ಮಟ್ಟಕ್ಕೆ ಬರುತ್ತದೆ ಎಂಬುದನ್ನು ಲಾಕ್ ಡೌನ್ ಸಮಯದಲ್ಲೆ ನಿರ್ಧಾರವಾಯಿತಲ್ಲ. ಅದೆಷ್ಟೊ ಸಂಸಾರಗಳು ಕುಡಿತದಿಂದ ಬೀದಿಗೆ ಬಂದರೂ ಸರ್ಕಾರ ಅದಕ್ಕೆ ಮತ್ತಷ್ಟು ಉತ್ತೇಜನ ನೀಡುತ್ತಿದ್ದು ಆ ಎಲ್ಲ ಸಂಸಾರಗಳು ಬೀದಿಗೆ ಬಂದರೂ ಚಿಂತೆಯಿಲ್ಲ ದೇಶ ಉದ್ಧಾರ ಆಗುತ್ತಿದೆ ಅಷ್ಟು ಸಾಕು ಎಂಬ ಧ□ರ್ಯ ಸರಕಾರಕ್ಕೆ ಬಂದಿದೆ. ಕುಡಿತದ ದಾಸನಿಗೆ ಹೆಂಡತಿಯ ಮಾಂಗಲ್ಯವಿದೆಯಲ್ಲ!

ಭ್ರಷ್ಟಾಚಾರ ಮುಕ್ತ ಭಾರತ ಕೂಡ ಅವರ ಕನಸು ಆದರೆ ನಿತ್ಯ ಭ್ರಷ್ಟತೆ ಹೆಚ್ಚುತ್ತಲೆ ಇವೆ. ನೀಟ್, ಸಿಇಟಿ, ಪೋಲೀಸ್, ನೆಟ್, ಸೆಟ್ ಹೀಗೆ ದೇಶದ ಅತ್ಯುನ್ನತ ಹುದ್ದೆಗಳ ಅರ್ಹತಾ ಪರೀಕ್ಷೆಯಲ್ಲೂ ಅಕ್ರಮ.ಕೆಲಸ ಪಡೆಯಲೂ ಹಣ ಕೊಡಬೇಕು, ಪೆನ್ಶನ್ ಪಡೆಯಲೂ ಹಳ್ಳಿಯಿಂದ ದಿಲ್ಲಿಯ ವರೆಗೂ ಕೈ ಬಿಸಿ ಮಾಡಬೇಕು.

ಹೀಗಿರುವ ಭವ್ಯ ಭಾರತದ ಗಾಂಧೀಜಿಯ ಕನಸು ಹೇಗೆ ನನಸಾದೀತು? ಈ ನಿಟ್ಟಿನಲ್ಲಿ ಪ್ರಜ್ಞಾವಂತ ಯುವ ಪೀಳಿಗೆ ಹೋರಾಟ ಆರಂಭಿಸಿದರೆ ಅವರಿಗೆ ಅತ್ಯಂತ ಕ್ರೂರವಾಗಿ ಶಿಕ್ಷಿಸಿದ ಜಂತರ್-ಮಂತರ್ ಘಟನೆ ನಮ್ಮೆಲ್ಲರೆದುರು ಈಗಲೂ ಕಣ್ ಕಟ್ಟಿದಂತಿದೆ. ಎಷ್ಟೆಲ್ಲ ಅವಿವೇಕಿತನ, ಕ್ರೂರತೆ ಎಲ್ಲವನ್ನೂ ಹೊಂದಿದ ಅರೆ ಪ್ರಜ್ಞಾವಂತ ಭಾರತೀಯರು, ಪ್ರಜ್ಞಾವಂತರೂ ಸೇರಿ ಆಚರಿಸುವ ಗಾಂಧೀ ಜಯಂತಿಗೆ ನಿಜವಾದ ಅರ್ಥ ಹುಡುಕುವ ಜರೂರಿದೆ.



# ಗಾಂಧಿ ಜಯಂತಿ ಅಂಗವಾಗಿ ವಿವಿಧ ವೃತ್ತ, ರಸ್ತೆಗಳ ಸ್ವಚ್ಛತೆ

**ಹಾವೇರಿ:** ಗಾಂಧಿ ಜಯಂತಿ ಅಂಗವಾಗಿ ಬುಧವಾರ ನಗರದ ವಿವಿಧ ರಸ್ತೆಗಳು ಹಾಗೂ ವೃತ್ತಗಳ ಸ್ವಚ್ಛತಾ ಕಾರ್ಯದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗಿಗಳಾಗಿ ಶ್ರಮದಾನ ಮಾಡಿದರು.

ಮಹಾನ್ ವ್ಯಕ್ತಿಗಳ ಪುತ್ಥಳಿಯ ಸುತ್ತಮುತ್ತ ಕಸ ಹಾಕದಂತೆ ಹಾಗೂ ನಗರ ಸ್ವಚ್ಛತೆ ಬಗ್ಗೆ ಕಾಳಜಿಸಬೇಕು. ಸುಂದರ ನಗರ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಸಾರ್ವಜನಿಕರಿಗೆ ಕರೆ ನೀಡಲಾಯಿತು.

ಎಲ್ಲ ಇಲಾಖೆಗಳ ಅಧಿಕಾರಿಗಳು ಹಾಗೂ ನೌಕರರು ಸೇರಿದಂತೆ ಒಂದು ಸಾವಿರಕ್ಕೂ ಅಧಿಕ ಅಧಿಕಾರಿ -ನೌಕರರು ತಂಡ ತಂಡವಾಗಿ ಇಂದಿನ ಶ್ರಮದಾನ ಕಾರ್ಯದಲ್ಲಿ ಪಾಲ್ಗೊಂಡು ಜೆ.ಎಚ್.ಪಟೇಲ್ ವೃತ್ತ, ವಿ.ಕೃ.ಗೋಕಾಕ ವೃತ್ತ, ಶ್ರೀ ಬಸವೇಶ್ವರ ವೃತ್ತ, ಸುಭಾಸ ವೃತ್ತ, ವಿ.ಕೃ. ಗೋಕಾಕ, ಜೆ.ಪಿ.ವೃತ್ತ, ಮಹಾತ್ಮಗಾಂಧಿ ವೃತ್ತ, ಮೈಲಾರ ಮಹದೇವಪ್ಪ ವೃತ್ತ, ಹೊಸಮನಿ ಸಿದ್ದಪ್ಪ ವೃತ್ತ, ಕಿತ್ತೂರ ಚನ್ನಮ್ಮ ವೃತ್ತ, ಮಹರ್ಷಿ ವಾಲ್ಮೀಕಿ ವೃತ್ತ, ನಗರದ ಪ್ರಮುಖ ಬೀದಿಗಳ ಸ್ವಚ್ಛತೆ ಕಾರ್ಯ ನೆರವೇರಿಸಿದರು.

ತಹಶೀಲ್ದಾರ ಶರಣಮ್ಮ, ನಗರಸಭೆ ಪೌರಾಯುಕ್ತ ಕಾಂತರಾಜು, ಚುನಾವಣಾ ತಹಶೀಲ್ದಾರ ಅಮೃತಗೌಡ ಪಾಟೀಲ, ಜಿಲ್ಲಾಧಿಕಾರಿಗಳ ಕಚೇರಿ, ತಹಶೀಲ್ದಾರ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪಶು ಸಂಗೋಪನೆ ಇಲಾಖೆ, ಕಂದಾಯ ಇಲಾಖೆ, ಅಬಕಾರಿ, ಅಗ್ನಿಶಾಮಕ, ಪ್ರಾದೇಶಿಕ ಸಾರಿಗೆ ಇಲಾಖೆ, ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿ ಶ್ರಮದಾನದ ಮೂಲಕ ನಗರ ಸ್ವಚ್ಛತೆ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.




# ಆಸ್ಪತ್ರೆ ಹಾಗೂ ಕ್ಯಾಂಟಿನ್‌ಗೆ ಜಿಲ್ಲಾಧಿಕಾರಿ ಭೇಟಿ, ಸ್ವಚ್ಛತೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ

**ಹಾವೇರಿ:** ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಕ್ಯಾಂಟಿನ್‌ನಲ್ಲಿ ತಯಾರಿಸಲಾದ ಉಪಹಾರದಲ್ಲಿ ಸತ್ತ ಹಲ್ಲಿ ಪತ್ತೆಯಾದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಮಂಗಳವಾರ ಕ್ಯಾಂಟಿನ್ ಹಾಗೂ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕ್ಯಾಂಟಿನ್‌ಲ್ಲಿ ಆಹಾರ ತಯಾರಿಸುವಾಗ ಶುಚಿತ್ವ ಹಾಗೂ ರುಚಿಗೆ ಆದ್ಯತೆ ನೀಡಬೇಕು. ರೋಗಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ಜಾಗ್ರತೆ ವಹಿಸಬೇಕು. ಗುಣಮಟ್ಟದ ಆಹಾರ ಪದಾರ್ಥಗಳನ್ನು ಬಳಸಬೇಕು ಎಂದು ಸೂಚನೆ ನೀಡಿದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ತೆರಳಿ ಪರಿಶೀಲನೆ ನಡೆಸಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದರೊಂದಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿದ ಅವರು, ಆಸ್ಪತ್ರೆಗೆ ಬರುವ ಪ್ರತಿ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಪಿ.ಆರ್. ಹಾವನೂರ ಸೇರಿದಂತೆ ವಿವಿಧ ವೈದ್ಯರು ಹಾಜರಿದ್ದರು.



# ದೌರ್ಜನ್ಯ ಪ್ರಕರಣಗಳ ತಡೆಗೆ ಅಗತ್ಯ ಜಾಗೃತಿ ಮೂಡಿಸಿ: -ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ

**ಹಾವೇರಿ:** ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಡಗಳ ದೌರ್ಜನ್ಯ ಪ್ರಕರಣಗಳ ತಡೆಗೆ ಗ್ರಾಮ ಮಟ್ಟದಿಂದಲೇ ಅಗತ್ಯ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಜನರ ಮೇಲಿನ ದೌರ್ಜನ್ಯ ನಿಯಂತ್ರಣ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೌರ್ಜನ್ಯ ಪ್ರಕರಣಗಳು ಹೆಚ್ಚಾಗಲು ಕಾರಣ ಏನು ಎಂದು ತಿಳಿದುಕೊಳ್ಳಬೇಕು ಹಾಗೂ ಪ್ರಕರಣಗಳ ತಡೆಗೆ ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸುವುದು ಅವಶ್ಯವಾಗಿದೆ ಎಂದರು.

ದೌರ್ಜನ್ಯ ಪ್ರಕರಣಗಳು ಕಂಡು ಬಂದಾಗ ನಾಮನಿರ್ದೇಶಿತ ಸದಸ್ಯರ ಗಮನಕ್ಕೆ ತರಬೇಕು. ಪ್ರಕರಣದ ವಾಸ್ತವಸ್ಥಿತಿ ತಿಳಿದುಕೊಳ್ಳಬೇಕು. ಸಣ್ಣ-ಪುಟ್ಟ ವಿಷಯಗಳಿಗೆ ಪ್ರಕರಣಗಳು ನಡೆದಂತೆ ನೋಡಿಕೊಳ್ಳಬೇಕು ಎಂದರು.

ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯ ಶಿವರಾಜ ಹರಿಜನ ಹಾಗೂ ಬಸವರಾಜ ಹೆಡಿಗ್ಗೊಂಡ ಅವರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಕಾಲೋನಿಯಲ್ಲಿ ಜಾಗೃತಿ ಮೂಡಿಸಬೇಕು. ಮೊದಲು ಜಿಲ್ಲಾ ಮಟ್ಟದಲ್ಲಿ ಜಾಗೃತಿ ಸಭೆ ಮಾಡಿ ಹಾಗೂ ಗ್ರಾಮ ಪಂಚಾಯತಿಗಳಿಗೆ ಕರ ಪತ್ರ ಹಂಚುವ ಕೆಲಸವಾಗಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಗ್ರಾಮ ಸೇರಿದಂತೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗದವರು ಇತರೆ ವರ್ಗದವರು ಸೌಹಾರ್ದತೆ, ಅನ್ಯೋನ್ಯತೆ,ಪ್ರೀತಿ, ವಿಶ್ವಾಸದಿಂದ ಇರುವಂತೆ ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ. ದೌರ್ಜನ್ಯ ಪ್ರಕರಣಗಳು ಕಡಿಮೆಯಾಗಬೇಕು, ಅಂದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಸದಸ್ಯ ಶಿವರಾಜ ಹರಿಜನ ತಿಳಿಸಿದರು.

ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯರು ಜೆ.ಜೆ. ಎಂ. ಕಳಪೆ ಕಾಮಗಾರಿ ಪರಿಶೀಲಿಸುವಂತೆ ಹಾಗೂ ವಿವಿಧ ಗ್ರಾಮಗಳಲ್ಲಿ ನೀರು ಸಹ ಬರುತ್ತಿಲ್ಲ ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಮೂರು ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಶೇ. 90 ರಷ್ಟು ಕಾಮಗಾರಿ ಆಗಿದ್ದು, ಕೊನೆಯ ಹಂತದ ಕೆಲಸ ಬಾಕಿ ಇದೆ. ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು, ಎಲ್ಲ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರುವ ಕೊಡುವ ಕಾರ್ಯಮಾಡಲಾಗುವುದು. ಬರುವ ದಿನಗಳಲ್ಲಿ ಸರಿಯಾಗಿ ನೀರು ಪೂರೈಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ ಅವರು ಮಾತನಾಡಿ, ಏಪ್ರಿಲ್ -2026 ರಿಂದ ಸೆಪ್ಟೆಂಬರ್ ಮಾಹೆವರೆಗೆ 62 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 52 ನೈಜ ಪ್ರಕರಣಗಳಾಗಿದ್ದು, 10 ಸುಳ್ಳು ಪ್ರಕಣಗಳಾಗಿವೆ. ಜುಲೈ ಮಾಹೆಯಿಂದ ಸೆಪ್ಟೆಂಬರ್ ಮಾಹೆವರೆಗೆ 20 ಪ್ರಕರಣಗಳ ಸಂತ್ರಸ್ಥರಿಗೆ ರೂ.29,12,500 ಪರಿಹಾರ ಮಂಜೂರ ಮಾಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿಜಿಲ್ಲಾಪೊಲೀಸ್‌ವರಿಷ್ಠಾಧಿಕಾರಿಶ್ರೀಮತಿಯಶೋಧಾ ವಂಟಗೋಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಲ್ಜಿತಕುಮಾರ, ಸವಣೂರ ಉಪ ವಿಭಾಗಾಧಿಕಾರಿ ಪ್ರಕಾಶ ಖೋಡೆ, ಜಿ.ಪಂ.ಉಪ ಕಾರ್ಯದರ್ಶಿ ಡಾ.ಪುನಿತ್, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಡಿಎಸ್‌ಪಿ ರಮೇಶಕುಮಾರ, ಜಿಲ್ಲಾ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಸರೋಜಾ ಕೂಡಲಮಠ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರಗಳು, ಸ್ಥಳೀಯ ನಗರ ಸಂಸ್ಥೆಗಳ ಮುಖ್ಯಾಧಿಕಾರಿಗಳು, ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕಾ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು, ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯರಾದ ಸಂಜಯಗಾಂಧಿ ಸಂಜೀವಣ್ಣನವರ, ಎನ್.ಎಂ.ಗಾಳೆಮ್ಮನವರ, ರಮೇಶ ಕೊರವರ, ಜಗದೀಶ ಹರಿಜನ, ಅಜ್ಜಪ್ಪ ಗೋಣೆಮ್ಮನವರ, ಯಲ್ಲಪ್ಪ ದೇವಗಿರಿ ಇತರರು ಉಪಸ್ಥಿತರಿದ್ದರು.

# ಅ.1ರಂದು ಕ್ಯಾಂಪಸ್ ನೇಮಕಾತಿ ಡ್ರೈವ್

**ಹುಬ್ಬಳ್ಳಿ:** ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ಗೋವಾದ ಮೆ. ಫೋಯಿಬಸ್ ಲಿಮಿಟೆಡ್ ಸಂಸ್ಥೆಯ ಸಹಯೋಗದೊಂದಿಗೆ ಕ್ಯಾಂಪಸ್ ನೇಮಕಾತಿ ಡ್ರೈವ್ ನ್ನು ಅಕ್ಟೋಬರ್ 1 ರಂದು ಬೆಳಿಗ್ಗೆ 10.30 ಕ್ಕೆ ವಿದ್ಯಾನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ.

ಫಿಟ್ಟರ್, ಮಶಿನೀಸ್ಟ್, ಟರ್ನರ್ ಮತ್ತು ಅಡ್ವಾನ್ಸ್ಡ್ ಸಿಎನ್‌ಸಿ ಮಷೀನಿಂಗ್ ಟೆಕ್ನಿಷಿಯನ್ ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸ್ಟೈಪೆಂಡ್, ಸಾರಿಗೆ ಸೌಲಭ್ಯ, ವಸತಿ ಸೌಲಭ್ಯ, ಪ್ರೋತ್ಸಾಹಧನ, ಇ.ಎಸ್.ಐ, ಪಿ.ಎಫ್ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುವುದು. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಕ್ಯಾಂಪಸ್ ಡ್ರೈವ್ ಗೆ ತಮ್ಮ ಮೂಲ ಪ್ರಮಾಣಪತ್ರಗಳು, ರೆಸ್ಯೂಮ್ ಮತ್ತು ಫೋಟೋಗಳೊಂದಿಗೆ ಹಾಜರಾಗುವಂತೆ ವಿದ್ಯಾನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SAMALOCHANE RANEBENNURSUDDI KANNADA DAILY MORNING, OWNER, PUBLISHER BY: RAJESHWARI S OLEKAR, PUBLISHED FROM: H.NO, 58 MAIN ROAD, YAKALASAPUR, SUB DISTRICT RANEBENNUR, HAVERI, KARNATAKA-581115, PRINTED AT: VEDAMURTHY S T, GAYATHRI PUBLICATIONS, H.NO, 720, NEKAR COLONY, INDUSTRIAL AREA, HAVERI, KARNATAKA- 581115, EDITOR BY: RAJESHWARI S OLEKAR